Representation of Members.

Re. Public Sectors Workers Strike

C. M. ARUMUGHAM (K.G.F.).—Mr. Deputy Speaker Sir, yesterday there was an Adjourment Motion on the incidents that took place day before yesterday. In the course of the discussion several suggestions were made and the Hon. Chief Minister agreed to constitute a House Committee consisting of Members of both Houses and meet the Prime Minister and other Ministers in Delhi to bring about a solution between the Government of India and the striking workers and the J. A. F. leaders. But, after some time the Leader of the Opposision spoke something and you gave the ruling. Now where do we stand exactly ? Sir, it may be somebody 's interest to make this issue a prolonged issue. But, our interest is that they must end the Strike in the interest of the workers and that the Government must come forward to help the workers to call off the strike. Therefore, where exactly do we stand ? Sevaral times, when there is some incident, some violence, that matter is raised in this House, and after discussing we do not think about it. Therefore, I would appeal to the Chief Miniseer what exactly he proposes to do. Whether suggestion made by Sri Bommai, Sri Deve Gowda and my self stands ? In fact, we know the limitations of the State Government. The State Government cannot dictate the Centre to solve this problem. But, he can make some effort. He can meet the Prime Minister, request her to have a dialogue with the J. A. F. leaders. For all these 72 days people are suffering and workers are suffering. At least in Bangalore, for the last three months they have no salary and those who are depending and listening to the leaders, may eat one meal a day. But what about the children and the others ? You will have to kindly take all these points into consideration.

SRI K. BHASKARA NAIDU.—Why did yon not oppose the Leader of the Opposition yesterday ? You should have told him.

C. M. ARUMUGHAM.—He asked the Government to refer the matter for arbitration ? Is it possible to refer to arbitration unless both the parties agree ? Government cannot do it. Arbitration and adjudication are time consuming factors. If it is referred to adjudication, they are not going to decide overnight or tomorrow. Our Chief Minister knows it and some of our Members are aware of it. It is highly impossible for the Union leaders to call off the strike. It is not possible. The workers will not accept. The strike is going on for 72 days in Bangalore city. The headquarters of the Government and not elsewhere. The Chief Minister has made some

efforts, calling them and he went to Delhi. I would only appeal to the Chief Minister what exactly he proposed to do. He must have compassion and tell the working class. He said all the trade unions are controlled by parties also. It is not so. May be Some unions are controlled by some political party. But, nevertheless, the members, they are not the members of the political party. It is not attached, because some political party leaders are controlling the trade unions, because they are all belonging to that party. I would appeal to the Hon. Chief Minister to help the workers. I cannot say you should do that and it must be your responsibility. You have alo got some limitations. State Government has got some limitations. It is the question of how much capacity this union has got. Again the discussion with the management or with the Government will not help it. At least, a meeting with the Prime Minister. if you kindly arrange for the leaders I feel it is only possible for the Prime Minister to solve this problem. It is only possible to the Chief Minister to talk to the Prime Minister, For other ministers it is not possible. I appeal on behalf of the working class, because I am coming from an area where 6,000 workers are working in the Bharat Earth Movers Ltd., one in Bangalore and another in K. G. F. I know their suffering. They are living in Robertsonpet. Some Of them left the place to thier native places. A worker was drawing about Rs. 700 to Rs. 800 a month. Some over Rs. 1,000. Without salary is it possible to maintain ?

SRI MALLUR ANANDA RAO.—What is your suggestion ?

C. M. ARUMUGHAM.-My suggestion is that the Hon. Chief Minister must arrange a meeting of the J. A. F. leaders with the Prime Minister. He must take the intiative. When there is an important problem like Maharastra border dispute they went to Delhi so many times. We tried to appraise the fact. When presenting the case it is better somebody speakes on their behalf, persuade them and bring to their notice what exactly is the situation prevailing in Bangalore. We must tell the Government and the top leaders in Delhi. I appeal to the Hon. Chief Minister to kindly intervence in the matter and settle this dispute.

SRI B. V. KAKKILAYA.—I entirely support Sri Armugham Yesterday Hon. Leader of the Opposition made a suggestion about arbitration. The State Government can order arbitration only if the two parties to the dispute agree. That is the legal position. Now the point is whether the Govenment of India that is one party, if tthey agree then perhaps the J.A F. will also consider. But, here She point is to persuade the Government of India to talk to them. hat the dispute is settled amicably between the two parties

So, what we suggested yesterday is that the Hon. Chief Minister should persuade the Prime Minister to have some talk with the people and open her mind and understand what they have also to say and come to some understanding. That will facilitate the withdrawal of the strike. I entirely agree with Sri C. M. Arumugham.

ಶ್ರೀ ಎಚ್ ಡಿ. ದೇವೇಗೌಡ.—ಮಾನ್ಯ ಉಪಾಧ್ಯಕ್ಷರೇ, ನಿನ್ನೆ ಈ ವಿಷಯ ಚರ್ಚೆಗೆ ಬಂದಾಗ ಈ ಸದನದ ಎಲ್ಲಾ ವಿವಿಧ ರಾಜಕೀಯ ಪಕ್ಷಗಳಿಂದ ಕೂಡಿದ ಒಂದು ನಿಯೋಗವನ್ನು ದೆಹಲಿಗೆ ಕಳುಹಿಸಬೇಕು ಎಂದು ಸಲಹೆ ಮಾಡಿದವರ ಪೈಕಿ ನಾನು ಒಬ್ಬ. ಆಂದರೆ, ವಿರೋಧ ಪಕ್ಷದ ಮುಖಂಡರು ಮಾತನಾಡ ತಕ್ಕಂತಹ ಕಾಲದಲ್ಲಿ ನಾನು ಈ ಸಭೆಯಲ್ಲಿ ಪೂರ್ತ ಕಾಲ ಇರಲಿಕ್ಕೆ ಸಾಧ್ಯವಾಗಲಿಲ್ಲ. ಏಕೆಂದರೆ ನಮ್ಮ ಪಕ್ಷದ ಅಧ್ಯಕ್ಷರಾದ ಶ್ರೀ ಚಂದ್ರಶೇಖರ್‌ರವರು ದೆಹಲಿಯಿಂದ ಬಂದಿದ್ದರು, ಅವರನ್ನು ರಿಸೀವ್ ಮಾಡು ವುದಕ್ಕಾಗಿ ಏರ್‌ಪೋರ್ಟ್‌ಗೆ ಹೋಗಿದ್ದೆ. ಈ ಸಭೆಯ ಕಾರ್ಯಕಲಾಪ ನಡೆಯುವಾಗ ಈ ಸಭೆಯಲ್ಲಿ ಇರಲಿಕ್ಕೆ ಸಾಧ್ಯವಾಗಲಿಲ್ಲ. ನಿನ್ನೆ ವಿರೋಧಪಕ್ಷದ ನಾಯಕರು ಒಂದು ನಿಲುವು ತೆಗೆದು ಕೊಂಡಿದ್ದಾರೆ. ಆದಕ್ಕೆ ಅವರು ಸರ್ವ ಸ್ವತಂತ್ರರು. ಅವರ ನಿಲುವನ್ನು ನಾನು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಅವರ ನಿಲುವಿನ ಬಗ್ಗೆ ನನ್ನ ಭಿನ್ನಾಭಿಪ್ರಾಯವಿಲ್ಲ. ಆದರೆ ಈ ಸಂದರ್ಭದಲ್ಲಿ ಒಂದು ಸ್ಪಷ್ಟೀಕರಣ ಮಾಡಬೇಕಾಗುತ್ತದೆ. ನಾವು ಏನು ಒಂದು ಸಲಹೆಯನ್ನ ನಿನ್ನೆ ಇಟ್ಟಿದ್ದೇವೆ ಅದು ಈ ರಾಜ್ಯದ ಸುಮಾರು ೧ ಲಕ್ಷ ಕಾರ್ಮಿಕರ ಮತ್ತು ಅವರ ಕುಟುಂಬಕ್ಕೆ ಸಂಬಂಧಪಟ್ಟ ಪ್ರಶ್ನೆ. ಈ ಪ್ರಶ್ನೆಯನ್ನು ಬಗೆಹರಿಸತಕ್ಕಂತಹ ಕಾಲದಲ್ಲಿ ಈ ಸದನದ ಜವಾಬ್ದಾರಿ ಇದೆ ಎನ್ನತಕ್ಕಂತಹ ಮಾತನ್ನು ಕೂಡ ನಾನು ಹೇಳಂತ್ತೇನೆ. ಈ ಸಭೆ ರಾಜ್ಯದ ಮೂರು ಕೋಟಿ ಜನರ ಸಮಸ್ಯೆಯನ್ನು ಬೆಂಬಲಿಸತಕ್ಕದ್ದಾಗಿದೆ, ಪ್ರತಿನಿಧಿಸತಕ್ಕದ್ದಾಗಿದೆ. ಇದನ್ನು ಮಾನ್ಯ ವಿರೋಧ ಪಕ್ಷದ ಮುಖಂಡರು ಒಪ್ಪಿಕೊಳ್ಳುತ್ತಾರೆಂದು ನಾನು ಭಾವಿಸುತ್ತೇನೆ ಕಾರ್ಮಿಕರ ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೆ ಈ ಸಭೆಯ ಒಂದು ನಿಯೋಗ ಹೋಗಿ ಕೇಂದ್ರದ ಮುಖಂಡರನ್ನು ಒತ್ತಾಯ ಮಾಡತಕ್ಕಂತಹ ಅಧಿಕಾರ ಇಲ್ಲವೆಂದು ಯಾರು ಭಾವಿಸಿ ಕೊಳ್ಳಲಿಕ್ಕೆ ಸಾಧ್ಯವಿಲ್ಲ. ವಿರೋಧ ಪಕ್ಷದ ಮುಖಂಡರು ಅಧಿಕೃತ ಮುಖಂಡರಾಗಿದ್ದಾರೆ. ಅವರು ಒಂದು ಮಾತನ್ನು ಹೇಳಿದ್ದಾರೆ ಅದು ನನ್ನ ಮನಸ್ಸಿಗೆ ಬಹಳ ಖೇದವಾಗುತ್ತದೆ. We cannot be the petitioners ಅವರು ಪೆಟಿಷನರ್ಸ್ ಎನ್ನುವ ಪದ ಪ್ರಯೋಗ ಮಾಡಿದರು, ನಾನು ಅದನ್ನು ತಪ್ಪಾಗಿ ತಿಳಿದುಕೊಂಡಿಲ್ಲ. ನಾವು ಪೆಟಿಷನರ್ಸ್ ಆಗಲಿಕ್ಕೆ ಸಾಧ್ಯವಿಲ್ಲ. ಈ ಸದನದ ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಕೇಂದ್ರದಲ್ಲಿ ಯಾರೇ ಅಧಿಕಾರದಲ್ಲಿರಲಿ, ಯಾವುದೇ ಪಕ್ಷ ಅಧಿಕಾರದಲ್ಲಿರಲಿ, ಈ ಸದನ ಸಂವಿಧಾನಾತ್ಮಕವಾಗಿ ಈ ಸದನದ ಮುಖ್ಯಸ್ಥರು ಸದನದ ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಕೇಂದ್ರದ ಪರಿಷ್ಕರನ್ನು ನೋಡುವುದಕ್ಕೆ ಹೋದಾಗ ಆರ್ಜಿದಾರರೆಂದು ಪರಿಗಣಿಸುವುದಾದರೆ ಜನತಂತ್ರದಲ್ಲಿ ವಿಶ್ವಾಸ ಎಲ್ಲಿ ಇದೆ. ಯಾರು ಮುಖಂಡರಿದ್ದಾರೆ ಅವರಿಗೆ ಈ ಮಾತನ್ನು ಹೇಳಬೇಕಾಗುತ್ತದೆ. ಆರ್ಜಿದಾರರೆಂದು ಯಾರು ಹೇಳುವುದಕ್ಕೆ ಸಾಧ್ಯವಿಲ್ಲ. This is not a new thing for us. We have sent various delegations. When Sri Veerendra Patil was Chief Minister in Karnataka. ಕೇಂದ್ರದಲ್ಲಿ ಬೇರೆ ರಾಜಕೀಯ ಪಕ್ಷ ಅಧಿಕಾರದಲ್ಲಿದ್ದಿತ್ತು. ಸುಮಾರು ೧೦ ಡೆಲಿಗೇಷನ್ ಕಳುಹಿಸಿದ್ದರು, ಅವರು ಯಾರು ಕೂಡ ಆರ್ಜಿದಾರರಾಗಿ ಹೋಗಿಲ್ಲ. ನಾವು ಕಾವೇರಿ ಜ್ವಲಂತ ಸಮಸ್ಯೆಯ ಬಗೆ ನಾವು ಪಕ್ಷಾತೀತವಾದ ಒಂದು ನಿಲುವು ತಾಳತಕ್ಕಂತಹ ಕಾಲದಲ್ಲಿ ನಾವು ಆರ್ಜಿದಾರರಾಗಿ ಹೋಗಲಿಕ್ಕೆ ಸಾಧ್ಯವಿಲ್ಲ. ಆ ಒಂದು ಭಾವನೆ ವ್ಯಕ್ತಪಡಿಸುವುದು ಸಾಧುವಲ್ಲ. ನಿನ್ನೆ ನಾನು ಈ ಸಭೆಯಲ್ಲಿ ಕೊನೆಯವರೆಗೂ ಇರಲಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಶ್ರೀಮತಿ ಇಂದಿರಾಗಾಂಧಿಯವರಿಗೆ ಒಂದು ಮನವಿ ಕಳುಹಿಸಿದ್ದಾ ರೆಂದೂ ಪತ್ರಿಗಳಲ್ಲಿ ಬಂದಿದೆ. Shall we conclude that this is only a petition. can't understand this. After all on behalf of labourers with good Intention he made an appeal. ನಾವು ಅದನ್ನು ಆರ್ಜಿಯೆಂದು ಭಾವಿಸಿಕೊಳ್ಳಲು ಸಾಧ್ಯವಿಲ್ಲ. As a responsible leader of Opposition and All-India President of a Political Party. ೧ ಲಕ್ಷ ೨೫ ಸಾವಿರ ಕಾರ್ಮಿಕರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಧಾನ ಮಂತ್ರಿಗಳ ಮೇಲೆ ಒತ್ತಾಯ ತರುವುದಕ್ಕೆ ಒಂದು ಮನವಿಯನ್ನು ಕಳುಹಿಸಿದ್ದಾರೆ. ಅದನ್ನು

ಆರ್ಜಿಯೆಂದು ಭಾವಿಸಿಕೊಳ್ಳಲು ಸಾಧ್ಯವಿಲ್ಲ. Why should we presume like that? I cannot understand. ನಾವು ಮಾತನಾಡದೆ ಇದ್ದರೆ, ಕಾರ್ಮಿಕರ ಬಗ್ಗೆ ಕಾಳಜಿ ಇಲ್ಲವೆಂದೂ ಈ ಸದನದಲ್ಲಿ ರಾಜಕೀಯ ಮಾಡಲಿಕ್ಕೆ ಸಾಧ್ಯವಿಲ್ಲ. ಯಾರು ಅಧಿಕಾರವನ್ನು ಕಳೆದುಕೊಂಡಿದ್ದಾರೆ ಅವರು ಇದರಿಂದ ಅಧಿಕಾರ ಉಳಿಸಿಕೊಳ್ಳುತ್ತೇವೆಂದು ತಿಳಿದುಕೊಂಡಿದ್ದರೆ ಅದೂ ಸಾಧ್ಯವಿಲ್ಲ. ಇವತ್ತು ೧ ಲಕ್ಷ ೨೫ ಸಾವಿರ ಕಾರ್ಮಿಕ ಕುಟುಂಬಗಳ ಪರಿಸ್ಥಿತಿ ಏನಾಗಿದೆ? ಬಿನ್ನಿಮಿಲ್ಲಿದ ಪ್ರಕರಣ ಬಂದಾಗ ನಾನೂ ಅನಿರ್ದಿಷ್ಟ ಕಾಲದವರೆಗೆ ಉಪವಾಸ ಮಾಡುತ್ತೇನೆ ಎನ್ನುವ ನಿಲುವನ್ನು ತೆಗೆದುಕೊಂಡಾಗ ಹಿಂದಿನ ಮುಖ್ಯ ಮಂತ್ರಿಗಳು ಈಗಿನ ವಿರೋಧಪಕ್ಷದ ಮುಖಂಡರು ನನ್ನನ್ನು ಕೇಳಿದರು, ಇಂತಹ ಎಕ್ಸಿಟ್ರೀಮ್ ಪರಿಸ್ಥಿತಿಗೆ ಹೋಗಬಾರದು, ಅದರ ಪರಿಣಾಮ ಬಹಳ ಭೀಕರವಾಗುತ್ತದೆಂದು ಹೇಳಿ ೧೫ ದಿವಸಗಳಲ್ಲಿ ಲಾಕೌಟ್ ಓಪನ್ ಮಾಡಿದರು. After all it is a legitimate duty of the Opposition. ಇಂತಹ ಸಮಸ್ಯೆ ಬಂದಾಗ ಹೋರಾಟ ಮಾಡಬೇಕು, ಅದರಿಂದ ಬೆಂಬಲ ಬರುತ್ತದೆ. ಓಟು ಬರುತ್ತದೆ ಎನ್ನುವ ಭಾವನೆಯಿಂದ ಕೆಲಸ ಮಾಡಲಿಲ್ಲ. ಅಂತಹ ಸಮಯದಲ್ಲಿ ನಮ್ಮ ಕರ್ತವ್ಯ ಏನಿದೆ ಅದನ್ನು ಮಾಡಬೇಕಾಗುತ್ತದೆ. ಮುಖ್ಯಮಂತ್ರಿಗಳ ನಾಯಕತ್ವದಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರ ಒಂದು ನಿಯೋಗ ಕಾರ್ಮಿಕರ ಪರಿಸ್ಥಿತಿಯನ್ನು ದೆಹಲಿಗೆ ಹೋಗಿ ಅವರ ಸಾಕಷ್ಟು ಮನವರಿಕೆ ಮಾಡಿ ಈ ವಿಷಯವನ್ನು ಏನಾದರೂ ಮಾಡಿ ಬಗೆಹರಿಸುವಂತೆ ಮನ ಒಲಿಸತಕ್ಕಂತಹ ಪ್ರಯತ್ನ ಮಾಡಬೇಕು. Labour is a State Subject. ಕೇಂದ್ರದಲ್ಲಿ ಯಾವುದೇ ರಾಜಕೀಯ ಪಕ್ಷ ಅಧಿಕಾರದಲ್ಲಿರಲಿ, ಕೇಂದ್ರ ಸರ್ಕಾರ ತೆಗೆದುಕೊಂಡ ನಿಲುವಿಗೆ ರಾಜ್ಯ ಸರ್ಕಾರ ವಿರುದ್ಧವಾಗಿ ಹೋಗಲಿಕ್ಕೆ ಸಾಧ್ಯವಿಲ್ಲ. ಯಾರೇ ಆಗಲಿ ಓಟಿಗೋಸ್ಕರವಾಗಿ ಕೆಲಸ ಮಾಡುವುದಕ್ಕೆ ಹೋದರೆ ಜನ ಮೆಚ್ಚುತ್ತಾರೆಂದು ಭಾವಿಸುವುದಕ್ಕಾಗುವುದಿಲ್ಲ. ಸ್ವಾಮಿ ಈ ವಿಷಯದ ಬಗ್ಗೆ ಕಳಕಳಿಯಿಂದ ವಿನಂತಿ ಮಾಡಿಕೊಳ್ಳಲು ಇಚ್ಛಿಸುತ್ತೇನೆ. ಇವತ್ತು ಜಾಯಿಂಟ್ ಆಕ್ಷನ್ ಕಮಿಟಿ ಬೇರೆ ಬೇರೆ ಪಕ್ಷಗಳ ಮುಖಂಡರನ್ನು ಕರೆಸಿ ಮುಖ್ಯ ಮಂತ್ರಿಗಳ ಚೇಂಬರಿನಲ್ಲಿ ಡಿಸ್‌ಕಷನ್ ಮಾಡೋಣ. ಈ ಸಮಸ್ಯೆಗೆ ಪರಿಹಾರ ಕಂಡು ಹಿಡಿಯೋಣ ಇದರ ಬಗ್ಗೆ ಎಲ್ಲರಿಗೂ ಆಸಕ್ತಿ ಇದೆ. ಕಾರ್ಮಿಕರ ಮಕ್ಕಳಿಗೆ ಅನ್ನವಿಲ್ಲ, ಅವರು ಶಾಲೆಗಳಿಗೆ ಹೋಗುತ್ತಿಲ್ಲ. ಇಂತಹ ಒಂದು ಕ್ಲಿಷ್ಟ ವಾತಾವರಣ ಮುಂದುವರಿದರೆ ಯಾರಿಗೂ ಸಂತೋಷ ತರತಕ್ಕಂತಹ ವಿಷಯವಲ್ಲ. ಸಮಸ್ಯೆ ಕೈಲಾದ ಪ್ರಯತ್ನ ಮಾಡೋಣ. ಮಧುರ ವಾತಾವರಣದಲ್ಲಿ ಈ ವಿಷಯವನ್ನು ಬಗೆಹರಿಸಲು ಸಹಕಾರ ಬೇಕಾಗುತ್ತದೆ. The Joint Action Committee must also Co-operate. They must have confidence in this House. This is not a political issue and not an issue of the Government. This is the issue of the entire House. If at all you wane to go to the rescue of these friends, they must also have confidence in us. ಈ ಸಭೆಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಹೋದರೆ ಕಳೆದ ೨ ತಿಂಗಳಿಂದ ಏನು ಮುಷ್ಕರ ನಡೆಯುತ್ತಿದೆ, ಇದರ ಬಗ್ಗೆ ಒಂದು ನಿಯೋಗ ದೆಹಲಿಗೆ ಹೋಗಬೇಕೆಂದು ಏನು ಇದೆ ಅದು ರಾಜಕೀಯ ಅಲ್ಲ. ನಾನು ಸಮ್ಮ ಬೊಮ್ಮಾಯಿಯವರು ಮತ್ತು ಜೆ.ಎಚ್. ಪಟೇಲ್‌ರವರು ಚರ್ಚೆ ಮಾಡಿದ್ದೇವೆ. ಈ ಸಮಸ್ಯೆಗೆ ಒಂದು ಪರಿಹಾರ ಕಂಡುಹಿಡಿಯಬೇಕು ಎಂದು ಸಲಹೆ ಮಾಡಿದ್ದಾರೆ ಮತ್ತೇನು ಅಲ್ಲ. ಈಗಲೂ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮತ್ತು ವಿರೋಧ ಪಕ್ಷದ ಮುಖಂಡರಲ್ಲಿ ಮನವಿ ಮಾಡಿಕೊಳ್ಳುತ್ತೇನೆ ಇದನ್ನು ಪಕ್ಷಾತೀತವಾಗಿ ನೋಡಬೇಕಾಗುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡತಕ್ಕಂತಹ ಕಾಲದಲ್ಲಿ ಜಾಯಿಂಟ್ ಆಕ್ಷನ್ ಕಮಿಟಿಯನ್ನು ಕರೆದು ವಿವಿಧ ರಾಜಕೀಯ ಪಕ್ಷಗಳ ಮುಖಂಡರನ್ನು ಕರೆಸಿ ಚರ್ಚೆ ಮಾಡೋಣ, ಒಂದು ನಿಯೋಗ ಹೋಗೋಣ. ಒಳ್ಳೆಯ ವಾತಾವರಣ ನಿರ್ಮಾಣ ಮಾಡಲು ಕೇಂದ್ರ ಏನು ಒಂದು ಬಿಗಿ ನಿಲುವು ತಾಳಿದೆ ಅದನ್ನು ಬಗೆಹರಿಸುವುದರಲ್ಲಿ ಜಾಯಿಂಟ್ ಆಕ್ಷನ್ ಕಮಿಟಿಯ ಜವಾಬ್ದಾರಿ ಇದೆ. ಈ ಸಭೆ ಮುಕ್ತಾಯವಾಗುವ ಸಮಯದಲ್ಲಿ ನಿನ್ನೆ ಉಪಾಧ್ಯಾಕ್ಷರು ಏನು ಒಂದು ರೂಲಿಂಗ್ ಕೊಟ್ಟಿದ್ದಾರೆ ಅದು ಪತ್ರಿಕೆಗಳಲ್ಲಿ ಬಂದಿದೆ, ಅದು ನಿಲುವಳಿ ಸೂಚನೆಗೆ ಪುರಸ್ಕಾರ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳಿದ್ದಾರೆ, ಅದು ಸ್ವಾಭಾವಿಕ. ಈ ಜ್ವಲಂತ ಸಮಸ್ಯೆಯನ್ನು ಬಗೆಹರಿಸುವಲ್ಲಿ ನಿನ್ನೆ ಕೊಟ್ಟಿರತಕ್ಕಂತಹ ಸಲಹೆ ಏನಿದೆ ಅದು ಇಲ್ಲಿಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಸಲಹೆ ಕೊಟ್ಟಿದ್ದೇವೆ. ಆ ಸಲಹೆಯನ್ನು ಮುಂದುವರಿಸಲಿಕ್ಕೆ ಪ್ರಯತ್ನಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

10-00 A. M.

SRI K. BHASKAR NAIDU.—Sir, yesterday I heard all the discussions and conversations. Hon'ble Member Sri A. Lakshmisagar was saying time and again that the Government is sitting in a vacuum. But after hearing the discussions now I think Sri Sagar would be able to understand the situation and after the last speech made by the Leader of the Opposition he may be knowing who is trying to ferment this isssue. We are not doing that. My Chief Minister extended his hand to the greatest extent to solve this problem. He has agreed to every suggestions made by the otherside. But still attribution came from that side and the name of the Chief Minister has been brought in. I thought the Opposition Members and the person who brought the adjournment motion yesterday would protest at such remarks. But you sat quiet.

SRI H. GANGADHARAN.—We rose to speak but we were not given oppportunity...

SRI K. BHASKAR NAIDU.—You should have protested at that time. But you heard him and you were sitting mum. There was some attribution against the Chief Minister that he is making capital out of this. It is a sheer nonsense...

SRI H. GANGADHARAN.—Mr. Speaker, Sir, I strongly protest...

(*Interruptions*)

SRI B. V. KAKKILAYYA.—Sir, yesterday you gave a ruling on the adjournment motion moved by the Opposition members. Now, how could the hon'ble Member Sri Bhaskar Naidu raise this issue?

SRI H. GANGADHARAN.—Sir, I feel very sorry for the words used by the hon'ble Member Sri K. Bhaskar Naidu. Does it mean that what we speak are all nonsense? We cannot tolerate such attributions...

SRI K. BHASKAR NAIDU.—I read in the newspaper that the Parliament ruled that the word nonsense' is not unparliamentary. If it were to hurt your feelings, I say it has no sense.

SRI H. GANGADHARAN.—It is not the question of sense or nonsense. We are looking for a solution to this burning problem. That is important.

SRI K. BHASKAR NAIDU.—Yes, let us sit together and solve the problem. Our Chief Minister has come forward to help the workers. While doing so, let us not go by rules. Let us find out a solution to solve this problem. Yesterday the Leader of the Opposition also spoke on this issue. A suggestion came from the opposition side that

there must be a delegation to which the Hon'ble Chief Minister agreed. But still motives were attributed against the Chief Minister.

SRI P. RAMDEV.—That was agreed to, with a precondition...

SRI K. BHASKAR NAIDU.—At that time you could have appealed to he Chief Minister. If you had done so, the Chief Minister could ave agreed to your proposals. Now, you can say who is fermenting?

SRI B. V. KAKKILAYYA.—Yesterday, Sri Fernandes, Convenor of the J.A.F., requested the Speaker to seek clarifications, but he was notgiven an opportuni y. At that time you could have also protested.

SRI K. BHASKAR NAIDU.—The person who moved the adjournment motion has got every right to speak on it. Every member has got a right to putforth his submissions. It is not that the Leader of Opposition alone can speak.

SRI C. M. ARUMUGHAM.—Now what is the solution?

SRI K. BHASKAR NAIDU.—My point is our Chief Minister has gone more than half way to concede the suggestion made by the Opposition. So, the Opposition should come forword with a suggestion once more, without being objected to it by anybody, to take up a delegation and solve the burning problem concerning 70,000 workers. This, I say could be solved by the Chief Minister alone with your co-operation. Don't stand on any formalities. Let us sit together and solve this problem.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ನನಗೆ ಮಾನ್ಯ ಭಾಸ್ಕರನಾಯ್ಡು ಅವರ ಬಗ್ಗೆ ಅಪಾರವಾದ ಗೌರವವಿದೆ. ಆದರೆ ಅವರು ಮಾತನಾಡುವ ಭರದಲ್ಲಿ ಕೆಲವು ವಿಚಾರಗಳನ್ನು ಹೇಳಿದರು. ನೀವು ತೆಗೆದುಕೊಂಡ ನಿಲುವನ್ನು ನೆನ್ನೆದಿವಸ ವಿರೋಧಪಕ್ಷದ ಮುಖಂಡರು ವಿರೋಧ ಮಾಡಿದ ಕಾಲದಲ್ಲಿ ಏತಕ್ಕೆ ಪ್ರತಿಭಟಿಸಲಿಲ್ಲವೆಂದು ಕೇಳಿದರು. ನೆನ್ನೆದಿವಸ ಮಾನ್ಯ ಬೊಮ್ಮಾಯಿ ಅವರು ಮಾನ್ಯ ಆರ್ಮುಗಂ ಅವರು ಈ ಬಗ್ಗೆ ಪ್ರತಿಭಟಿಸಿದ್ದಾರೆ. ಮುಖ್ಯವಾಗಿ ಅವರಲ್ಲಿ ಒಂದು ವಿಚಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ, ಏನೆಂದರೆ, ಮಾನ್ಯ ಸಭಾ ನಾಯಕರು ಅನುಸರಿಸುವ ಮಾರ್ಗವನ್ನು ತಾವೂ ಸಹ ಅನುಸರಿಸಿ ಎಂದು, ಪಾರ್ಲಿಮೆಂಟರಿ ಪದ್ಧತಿಯು ಒಂದು ವಿಶೇಷ ವಾದಂಥ ಗುಣವೆಂದರೆ, ವಿರೋಧಪಕ್ಷದ ಕಡೆಯಿಂದ ಕೊಡುವುದನ್ನು ನೀವು ಆನಂದದಿಂದ ಸ್ವೀಕಾರ ಮಾಡಬೇಕು, ಆದೇ ಕಾಲಕ್ಕೆ ನೀವು ಕೊಡುವುದನ್ನು ತೆಗೆದುಕೊಳ್ಳುವ ಸಾಮರ್ಥ್ಯ ಹಾಗೂ ತಾಕತ್ ವಿರೋಧಪಕ್ಷಕ್ಕೆ ಇರಬೇಕು. ಇಲ್ಲದಿದ್ದರೆ ಇಲ್ಲಿ ಕುಳಿತು ಕೆಲಸ ಮಾಡುವುದಕ್ಕಾಗುವುದಿಲ್ಲ. ಇಲ್ಲಿ ಮಾತನಾಡುವವರು ಚಿಕ್ಕವರೇ ಇರಲಿ ಅಥವಾ ದೊಡ್ಡವರೇ ಇರಲಿ, ಅವರು ಹೇಳುವುದನ್ನು ಮೊದಲು ಕೇಳಬೇಕಾಗುತ್ತದೆ. ನೆನ್ನೆದಿವಸ ವಿರೋಧಪಕ್ಷದ ಮುಖಂಡರು ಮಾತನಾಡುವ ಕಾಲಕ್ಕೆ ನಾನು ಚೀಕಾರ ಶಬ್ದ ಎತ್ತುವುದಕ್ಕೆ ಹೋಗಲಿಲ್ಲ. ಅವರ ಭಾಷಣ ಮುಗಿದ ಮೇಲೆ ನಾನು ಇಲ್ಲಿ ಇದ್ದಿದ್ದರೆ ಕೇಳುತ್ತಿದ್ದೆ, ಆದರೆ ನಾನು ಇರಲಿಲ್ಲ. ಮುಖ್ಯವಾಗಿ ಈ ವಿಚಾರ ಯಾವುದೇ ಒಂದು ರಾಜಕೀಯ ಪಕ್ಷಕ್ಕೆ ಸಂಬಂಧ ಪಟ್ಟಿಲ್ಲ. ಇದು ಎಲ್ಲರಿಗೂ ಸೇರಿದ ಪ್ರಶ್ನೆಯಾಗಿದೆ. ಆದರೂ ಸಹ ನಮ್ಮ ಹಿಂದೂಸ್ಥಾನದಲ್ಲಿ ಕಳೆದ ೩೦ ವರ್ಷಗಳಿಂದ ಏನು ನಡೆದುಕೊಂಡು ಬಂದಿದೆ ಎಂದರೆ, ಇಂತಹ ಪ್ರಶ್ನೆಗಳು ಬಂದಾಗಲೆಲ್ಲಾ ವಿರೋಧ ಪಕ್ಷದ ಕಡೆಯಿಂದ ಇದೇ ರೀತಿಯ ಆಟಪಾಡುವುದು ನಡೆದುಕೊಂಡು ಬಂದಿದೆ. We all know what has taken place during 1978-79 so far as labour issues are concerned. I can read them. Now, I do not want to spoil the

atmosphere. During 1978-79 we know how the Congress (I) Leaders supported the railway workers during their agitation for 8.5% minimum bonus. All these things are going on in this country for last 30 years. ಆದ್ದರಿಂದ ಈ ದಿಶೆಯಲ್ಲಿ ಈ ಸಮಸ್ಯೆ ಬಗೆಹರಿಯುವುದಿಲ್ಲ. ಇದು ರಾಷ್ಟ್ರದ ಸಮಸ್ಯೆ ಎಂದು ಗುರುತಿಸಿ, ಎಲ್ಲ ಪಕ್ಷಗಳೂ ಸೇರಿಕೊಂಡು ಕೂತು ಚರ್ಚೆ ಮಾಡಿದರೆ ಮಾತ್ರ ಇದು ಬಗೆಹರಿಯುತ್ತದೆ. ಇಲ್ಲದಿದ್ದರೆ ಇಲ್ಲ. ಈ ಬಗ್ಗೆ ಕರ್ನಾಟಕದ ಮುಖ್ಯಮಂತ್ರಿಗಳು ತೆಗೆದುಕೊಂಡ ನಿಲುವಿನ ಬಗ್ಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ಇದೇ ನಿಲುವನ್ನು ರಾಷ್ಟ್ರದ ಮುಖಂಡರೂ ಸಹ ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಇದು ಬಗೆಹರಿಯುವುದಿಲ್ಲ. ಶ್ರೀಮತಿ ಇಂದಿರಾಗಾಂಧಿಯವರು ಈ ಮೊದಲು ೧೧ ವರ್ಷಗಳ ಕಾಲ ಪ್ರಧಾನಮಂತ್ರಿಯಾಗಿದ್ದರು, ಈಗ ಮತ್ತೆ ಪ್ರಧಾನಮಂತ್ರಿಗಳಾಗಿದ್ದಾರೆ. ಅವರು ಇನ್ನೂ ೧೧ ವರ್ಷಗಳ ಕಾಲ ಅಧಿಕಾರದಲ್ಲಿರಲಿ. ಅವರು ಈ ಒಂದು ಸಮಸ್ಯೆಯನ್ನು ರಾಷ್ಟ್ರೀಯ ಸಮಸ್ಯೆ ಎಂದು ತಿಳಿದುಕೊಂಡು ಬಗೆಹರಿಸಬೇಕೇ ಹೊರತು ತಮ್ಮ ಅಸಹಾಯಕತೆಯನ್ನು ತೋರಿಸಬಾರದು. ಅದೇಕಾಲಕ್ಕೆ ಎಲ್ಲ ರಾಜಕೀಯ ಪಕ್ಷಗಳೂ ಕೂಡ ಒಂದೆಡೆ ಕೂತು ಇದನ್ನು ಬಗೆಹರಿಸಲು ಸಹಾಯ ಮಾಡಬೇಕೇ ಹೊರತು ತನ್ನ ಅಸಹಕಾರವನ್ನು ತೋರಿಸಬಾರದು. ಶ್ರೀಮತಿ ಇಂದಿರಾಗಾಂಧಿಯವರು ಇನ್ನು ೧೧ ವರ್ಷಗಳ ಕಾಲ ಪ್ರಧಾನ ಮಂತ್ರಿಗಳಾದರೂ ಸಹ ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಸಾಧ್ಯವಿಲ್ಲ. It is not so easy unless all political parties sit together, identify the national problems, and find out solutions. ಅಲ್ಲಿ ಕೂತಿದ್ದರೆ ಎಲ್ಲಾ ಸರಿ ಮಾಡುತ್ತೇವೆ ಎಂದು ಯಾರಾದರೂ ತಿಳಿದುಕೊಂಡಿದ್ದರೆ ಅದು ಮೂರ್ಖತನ. ಇದರಿಂದಾಗಿ ಜ್ವಲಂತ ಸಮಸ್ಯೆಗಳ ಬಗ್ಗೆ ರಾಜಕೀಯ ಮಾಡಬಾರದು. ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಸಾರಿ ಸಾರಿ ಹೇಳಿದ್ದಾರೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇಂತಹ ಗಹನವಾದ ವಿಷಯಗಳಲ್ಲಿ ರಾಜಕೀಯ ಮಾಡುವುದು ಬೇಡ, ಅದನ್ನು ನಿಲ್ಲಿಸೋಣ. ಅದಕ್ಕೋಸ್ಕರ ಮಾನ್ಯ ಮುಖ್ಯಮಂತ್ರಿಗಳು ತೆಗೆದುಕೊಂಡಿರತಕ್ಕ ನಿಲುವು ಏನಿದೆ ಅದನ್ನು ಒಪ್ಪಿಕೊಳ್ಳತಕ್ಕ ಕಾಲದಲ್ಲಿ ಒಂದು ಮಾತನ್ನು ಹೇಳುತ್ತೇನೆ. ಇದರಲ್ಲಿ ಯಾವುದೇ ರಾಜಕೀಯ ತರದೇ ಜಾಯಿಂಟ್ ಆಕ್ಷನ್ ಕಮಿಟಿ ಮಾಡಿ ಎರಡೂ ಕಡೆಯ ಲೀಡರ್ಸ್‌ನ್ನು ಕಳಿಸತಕ್ಕ ಬಗೆ ತೆಗೆದುಕೊಂಡಿರತಕ್ಕ ನಿಲುವನ್ನು ಒಪ್ಪತಕ್ಕ ಕಾಲದಲ್ಲಿ ಒಂದು ಮಾತನ್ನು ಹೇಳುತ್ತೇನೆ. ೧೯೦೦ ರೂಪಾಯಿ ಸಂಬಳ ಪಡೆಯುವವರೂ ಧರಣಿ ಮಾಡುತ್ತಾರೆ. ೪೦ ಪರ್ಸೆಂಟ್ ಪಾವರ್ಟಿ ಲೈನ್ ಕೆಳಗೆ ಇದ್ದಾರೆಂದು ಎಲ್ಲಾ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದಮೇಲೆ ಹೇಳುತ್ತೇವೆ. ಅವರ ಬಗ್ಗೆ ಕಾಳಜಿ ಮಾಡುವುದಕ್ಕೆ ಚಿಂತೆ ಇಲ್ಲ. ೧೯೦೦ ರೂಪಾಯಿ ಮಿನಿಮಂ ಸಾಲರಿ ತೆಗೆದುಕೊಳ್ಳುವವರ ಬಗ್ಗೆ ಹೋರಾಟ ಮಾಡುತ್ತಾರೆ. ಯಾರಿಗೆ ಎರಡು ಹೊತ್ತು ಕೂಳಿಗೆ ಗತಿಯಿಲ್ಲ, ಅವರ ಬಗ್ಗೆ ಚಿಂತನೆಯಿಲ್ಲ. ರಾಷ್ಟ್ರದಲ್ಲಿ ಒಂದು ಕಡೆ ಅಭಿವೃದ್ಧಿ ಕಾರ್ಯ ಆಗಬೇಕು, ಮತ್ತೊಂದು ಕಡೆ ಸಮಸ್ಯೆ ಇದೆ. ಇವತ್ತು ದೇಶದಲ್ಲಿ ವಾತಾವರಣವನ್ನು ಕಲಕುವುದು ಬೇಡ. ಕೆಡಿಸುವುದು ಬೇಡ ಸುಮಧುರ ವಾತಾವರಣವನ್ನು ನಿರ್ಮಾಣಮಾಡುವುದರಲ್ಲಿ ನಾವೆಲ್ಲರೂ ಸಹಕಾರ ಕೊಡುವುದಕ್ಕೆ ಸಿದ್ಧರಾಗಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ಏನು ನಿಲುವನ್ನು ತೆಗೆದುಕೊಂಡಿದ್ದಾರೆ ಆ ನಿಲುವನ್ನು ಮುಂದುವರೆಸಿ, ಈ ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿಯಿರಿ, ಇದರಲ್ಲಿ ರಾಜಕೀಯ ಬೆರೆಸುವುದು ಬೇಡ ಎಂದು ನಾನು ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಮಳ್ಳೂರು ಆನಂದರಾವ್ (ರಾಜಾಜಿನಗರ). —ಮಾನ್ಯ ಉಪಾಧ್ಯಕ್ಷರೇ, ನಿನ್ನೆ ಚರ್ಚೆ ಈ ಬಗ್ಗೆ ಪ್ರಾರಂಭವಾದಾಗ ಬಿರುಸಿನಿಂದ ಪ್ರಾರಂಭವಾಯಿತು, ಆವೇಶದಿಂದ ಬಾಣ ಬಿರುಸುಗಳು ಎಲ್ಲಾ ಆಯಿತು. ಮುಕ್ತಾಯದ ಹಂತಕ್ಕೆ ಬರುತ್ತಿರುವಾಗ ಬಹಳ ತಿಳಿ ವಾತಾವರಣ ನಿರ್ಮಾಣವಾಯಿತು, ಈ ಸಭೆಯ ಹೊರಗಡೆ ಕೂಡ ಸೌಹಾರ್ದಯುತ ವಾತಾವರಣ ನಿರ್ಮಾಣಮಾಡಿ, ವರ್ಕರ್ಸ್ ಎಲ್ಲಾ ಕಾರ್ಖಾನೆಗಳಿಗೆ ಹೊಗುವಂತಾಗಿ ಅಂತೂ ಈ ಸಮಸ್ಯೆಗೆ ಪರಿಹಾರ ಕಾಣುತ್ತೆ ಎನ್ನುವ ಸ್ಥಿತಿಗೆ ಬಂತು. ಮಾನ್ಯ ವಿರೋದಪಕ್ಷದ ನಾಯಕರು ಸಭೆಗೆ ಬಾರದೇ ಇದ್ದಿದ್ದರೆ ಖಂಡಿತವಾಗಿಯೂ ಮುಕ್ತಾಯ ಬಾಗುತ್ತಿತ್ತು. ಅವರು ಪ್ರಾರಂಭದಿಂದಲೇ ಬರದೇ ಎಲ್ಲಾ ಮುಕ್ತಾಯವಾಗಬೇಕು, ಎಲ್ಲಾ ಒಮ್ಮತಕ್ಕೆ ಬರಬೇಕು ಎನ್ನುವಾಗ ಬಂದರು. ಊಟಮಾಡುವಾಗ ಸಾರು ಅನ್ನ ಊಟಮಾಡಿ ಪೊಸರನ್ನ ಊಟ ಮಾಡುವಾಗ ಮತ್ತೆ ಸಾರು ಅನ್ನ ಶುರುಮಾಡಿ ಕಲಸುಮೇಲೋಗರವಾಗಿ ಯಾರಿಗೂ ಊಟ ಸಿಕ್ಕಿಲ್ಲವೆನ್ನುವಂತೆ ಆಯಿತು. ಮುಗಿಯುವ ಹಂತದಲ್ಲಿ ಅವರು ಶಿಶುರಂಮಾಡಿ ಎಲ್ಲಿಗೆ ತೆಗೆದುಕೊಂಡು ಹೋದರೋ ಗೊತ್ತಿಲ್ಲ. ಮೈಕೇಲ್ ಫರ್ನಾಂಡಿಸ್ ಅವರು ವಾಕೌಟ್ ಮಾಡಿದರು, ತಾವು ರೂಲಿಂಗ್

ಕೊಟ್ಟಿರಿ. ಇಷ್ಟೆಲ್ಲಾ ನಿನ್ನೆ ಮಾನ್ಯ ಬೊಮ್ಮಾಯಿಯವರು, ಮಾನ್ಯ ದೇವೇಗೌಡರು ಈ ಸಲಹೆ ಕ ಡಿದಾ ಮಾನ್ಯ ಮೈಕೇಲ್ ಫರ್ನಾಂಡಿಸ್ ಅವರು ಆಫ್ ಹಾಂಡ್‌ನಲ್ಲಿ ನಿಂತು ಜಾಯಿಂಟ್ ಸಮಿತಿಗೆ ಒಪ್ಪಿದ್ದೇ ಎಂದು ಹೇಳಿದರು. ಈ ಒಂದು ಸಲಹೆಯನ್ನು ಮಾನ್ಯ ಬೊಮ್ಮಾಯಿಯವರು, ಮಾನ್ಯ ದೇವೇಗೌಡರ ಮಂಡನೆ ಮಾಡಿದಾಗ ಮಾನ್ಯ ಜೆ. ಹೆಚ್. ಪಟೇಲರಾದಿಯಾಗಿ ಇಡೀ ವಿರೋಧಪಕ್ಷಗಳಿಂದ ಒಂದ ಸಲಹೆ ಇದು ಎಂದು ನಾವು ತಿಳಿದುಕೊಂಡಿದ್ದೆವು. ಅವರು ಹೇಳುತ್ತಾ ಇದ್ದುದನ್ನು ಮಾನ್ಯ ಮುಖ್ಯ ಮಂತ್ರಿಗಳು ಹಾಗೇ ಒಪ್ಪಿಕೊಂಡರು. ಅವರು ಅದಕ್ಕೆ ಒಂದು ಕಂಡೀಷನ್ ಇಟ್ಟಿದ್ದಾರೆ. ಸ್ಟೈಕ್ ಮುಕ್ತಾಯಮಾಡಿ ಹೋಗಬೇಕು ಎನ್ನುವ ಕಂಡೀಷನ್ ಇಟ್ಟರು. ಇಂಥಾದ್ದು ಯಾವುದಾದರೂ ಸಲಹೆ ಬಂದಾಗ, ಸಮಸ್ಯೆ ತೀವ್ರವಾಗಿರಲಿ, ಶ್ರೀಮಾನ್ ದೇವರಾಜ ಅರಸ್ ಅವರು ಇಲ್ಲಿದ್ದಾಗ ಆಲ್ ರೈಟ್ ಸಮಿತಿ ಮಾಡುತ್ತೇವೆಂದು ಹೇಳಿದ ಒಂದು ಉದಾಹರಣೆ ತೋರಿಸಲಿ ಅವರು ನಮ್ಮನ್ನೆಲ್ಲಾ ಫಿಸಿಕಲಿ ಎತ್ತಿ ಹೊರಗಡೆ ಹಾಕಿದರು. ಮಾನ್ಯ ಗುಂಡೂರಾಯರನ್ನು ಹೊಗಳುತ್ತೇವೆ ಎಂದಲ್ಲ. ಅವರ ನಿಲುವನ್ನು ಒಪ್ಪಿಕೊಳ್ಳುತ್ತೇನೆನ್ನುವಾಗ, ರಾಜಕೀಯ ಬಿಟ್ಟುಬಿಡೋಣ, ಎಲ್ಲಾ ಕಾರ್ಮಿಕರು ಒತ್ತಾಯಿಸುತ್ತಿದ್ದಾರೆ. ಅವರ ಸಮಸ್ಯೆ ಹೃದಯವಿದ್ರಾವಕವಿದೆ ಎಂದು ಅದರ ಬಗ್ಗೆ ವರ್ಣನೆ ಮಾಡುವ ಅಗತ್ಯವಿಲ್ಲ. ಬೆಂಗಳೂರು ನಗರದಲ್ಲಿ ೭೦ ದಿನಗಳಿಂದ ಒಂದು ಕುಟುಂಬ ಒಂದು ಪೈಸೆ ಯಿಲ್ಲದೆ ವಾಸ ಮಾಡಿಂವುದು ಹೇಗೆ. ಎಷ್ಟರಮಟ್ಟಿಗೆ ಪರಿಸ್ಥಿತಿ ಬಂದಿವೆಯೆಂದರೆ ಮಾರ್ವಾಡಿಗಳು ಪಾತ್ರೆ-ಪಗಡ ಇಟ್ಟುಕೊಂಡು ಸಾಲ ಕೊಡುವುದಿಲ್ಲ. ಎಲ್ಲಾ ಮುಗಿದುಹೋಗಿ, ಬಾಡಿಗೆ ಕೊಡದೆ ಮನೆ ಓನರ್ ಬಾಡಿಗೇದಾರರನ್ನು ಹೊರಗೆ ಹಾಕುವ ಸ್ಥಿತಿ ಬಂದಿದೆ, ನನ್ನ ಕಾನ್‌ಸ್ಟಿಟ್ಯೂಯೆನ್ಸಿಯಲ್ಲೇ ಈ ಪರಿಸ್ಥಿತಿ ಬಂದಿದೆ. ಕಾರ್ಮಿಕರ ಮನಸ್ಥಿತಿ, ಅವರ ಸಮಸ್ಯೆ ಪರಿಹಾರವಾದರೆ ಸಾಕು. ಕಾರ್ಮಿಕರ ಒರಿಜಿನಲ್ ಡಿಮ್ಯಾಂಡನ್ನು ಇನ್ ಟೋಟೊ ಸರ್ಕಾರ ಒಪ್ಪಿಕೊಂಡರೂ ಕೂಡ ಅವರಿಗೆ ಬರತಕ್ಕ ಮಾನಿಟರಿ ಬೆನಿಫಿಟ್ ನಿಲ್. ಇದು ಇರತಕ್ಕ ಸ್ಥಿತಿ. ಕಾರ್ಮಿಕರು ಕೆಲಸಕ್ಕೆ ಹೋಗುವ ಮುಂಚೂಣಿ ಯಲ್ಲಿದ್ದಾರೆ. ಅವರು ೭೦ ದಿವಸಗಳಿಂದ ಕೆಲಸಕ್ಕೆ ಹೋಗಿಲ್ಲ. ಇನ್ನೂ ಹೋಗಬೇಡಿ ಅಂದರೆ ವಿಧಾನಸೌಧದ ಮುಂದೆ ಬಂದು ಕುಳಿತುಕೊಳ್ಳಲಿಕ್ಕೆ ಸಾಧ್ಯವಿದೆಯೇ. ನಿನ್ನೆ ಈ ಸಮಸ್ಯೆಯನ್ನು ಬಗೆಹರಿಸದೇ ಇದ್ದಂಥ ಜವಾಬ್ದಾರಿ ಮಾನ್ಯ ವಿರೋಧಪಕ್ಷದ ನಾಯಕರದ್ದು, ಅವರದೇ. ಈ ವಿರೋಧಪಕ್ಷಗಳಿಲ್ಲಾ ಕುಳಿತು ಹೇಳಲಿ. ಈಗ ಅವರು ಏನು ಸಲಹೆ ಮುಂದಿಟ್ಟಿದ್ದಾರೆ ಅದನ್ನು ಮಾನ್ಯ ಮುಖ್ಯ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಒಂದು ಕಂಡೀಷನ್ ಹಾಕಿದ್ದಾರೆ. ಸ್ಟೈಕನ್ನು ಮುಕ್ತಾಯ ಮಾಡಿ ಸರ್ವ ಪಕ್ಷಗಳ ಸದಸ್ಯರ ನಿಯೋಗ ಹೋಗೋಣ ಎಂದು ಹೇಳಿದ್ದಾರೆ. ಅದನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಮತ್ತೆ ಈ ಸಮಸ್ಯೆ ಬಗ್ಗೆ ಇಲ್ಲಿ ಚರ್ಚೆ ಮಾಡುವುದು ಬೇಡ. ಇಲ್ಲಿ ಚರ್ಚೆ ಮಾಡಿದರೆ ಅದು ಮುಕ್ತಾಯವಾಗುವುದಿಲ್ಲ. ಅವರು ಒಂದು ಸಲಹೆ ಮಾಡಿದ್ದಾರೆ. ಇವರು ಸ್ಟೈಕ್ ಮುಕ್ತಾಯಮಾಡಿ ನಂತರ ನಾವು ಹೋಗೋಣ ಎಂದು ಒಂದು ಕಂಡೀಷನ್ ಹಾಕಿದ್ದಾರೆ. ಮೊದಲನೇ ಭಾಗದ್ದು ಸಲಹೆ ಇದೆ. ಏನೆಂದರೆ, ಎರಡೂ ಸದನಗಳ ಸರ್ವ ಪಕ್ಷಗಳ ಸದಸ್ಯರ ನಿಯೋಗ ಕೇಂದ್ರಕ್ಕೆ ಹೋಗಬೇಕು, ಅದು ಯಾವರೀತಿ ಇರಬೇಕು ಎಂದು ತೀರ್ಮಾನಮಾಡಿ, ಅದು ಕೇಂದ್ರ ಸರ್ಕಾರದಲ್ಲಿ ಪ್ರಧಾನ ಮಂತ್ರಿಗಳ ಮನವೊಲಿಸಿ ಇದಕ್ಕೆ ಪರಿಹಾರ ಕಂಡುಹಿಡಿಯಬೇಕು. ಇದು ಸರ್ವಸಮ್ಮತ ವಾದುದು, ಇದಕ್ಕೆ ಯಾರ ಭಿನ್ನಾಭಿಪ್ರಾಯವಿಲ್ಲ. ವಿರೋಧಪಕ್ಷದವರು ಇದರ ಬಗ್ಗೆ ತೀರ್ಮಾನ ಮಾಡಿಕೊಳ್ಳಬೇಕು. ಸ್ಟೈಕ್ ಮುಕ್ತಾಯವಾದರೆ ಇದು ಆಗುತ್ತದೆ. ಅವರ ಮೇಲೆ ಹಠ ಹಿಡಿದು ಕೊಡಬಾರದು. ಇಲ್ಲಿ ಚರ್ಚೆ ಮಾಡಿದರೆ ಮುಕ್ತಾಯವಾಗುವುದಿಲ್ಲ. ವರ್ಕರ್ಸ್ ಬೀದಿ ಪಾಲಾಗುತ್ತಾರೆ. ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬೇಡಿ. ಅವರು ಇನ್ ಪ್ರಿನ್ಸಿಪಲ ಒಪ್ಪಿಕೊಳ್ಳುತ್ತಾರೆ. ಅವರ ಛೇಂಬರ್ಸ್‌ನಲ್ಲಿ ವಿರೋಧಪಕ್ಷದ ನಾಯಕರನ್ನು ಎಲ್ಲರನ್ನೂ ಕರೆದು ವಿಚಾರಮಾಡಿ. ನಾನು ವಿರೋಧ ಪಕ್ಷದ ಮಿತ್ರರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಸರ್ವ ಪಕ್ಷಗಳ ನಿಯೋಗ ಹೋಗಬೇಕು ಎಂದು ಸಭೆ ಒಪ್ಪಿರುವಾಗ ಪ್ರಧಾನ ವಿರೋಧ ಪಕ್ಷದ ಒಪ್ಪಿಗೆ ಇದೆಯೋ ಇಲ್ಲವೋ ಎಂದು ತಿಳಿದು ಕೊಂಡು ಅವರು ಹೇಳಿದರು ಎಂದು ಕಾಣುತ್ತದೆ. ಅವರು ಬಿಟ್ಟರು ನೀವು ಬೇಕಾದರೆ ಅವರ ಜೊತೆಗೆ ಹೋಗಿ ಎಂದು ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದರು. ಮಾನ್ಯ ದೇವೇಗೌಡರು ನಿಶ್ಚಯವಾಗಿ ಹೇಳಿದ್ದಾರೆ. ಆದ್ದರಿಂದ ದಯವಿಟ್ಟು ಬೇಗನೆ ಸ್ಟೈಕನ್ನು ಮುಕ್ತಾಯಮಾಡಿ ಸೌಹಾರ್ದಯುತವಾದ ವಾತಾವರಣನ್ನು ನಿರ್ಮಾಣಮಾಡಿ ಎಂದು ಹೇಳಬಯಸುತ್ತೇನೆ.

ಶ್ರೀ ಬಿ. ಸುಬ್ಬಯ್ಯಶೆಟ್ಟಿ.--ಮಾನ್ಯ ಉಪಾಧ್ಯಕ್ಷರೇ, ನಿಜವಾಗಿಯೂ ನಾವು ನಿನ್ನೆ ಏನು ಹೇಳಿದೆವು ಅಂದರೆ. ನಾವು ಹೋಗಬೇಕು, ಹೋಗಬಾರದು ಏನ್ನುವ ಪ್ರಶ್ನೆ ಇಲ್ಲ. ಅಲ್ಲಿರುವಂಥಾದ್ದು

ಏನೆಂದರೆ, ಲೇಬರ್ ಡಿಸ್ಪ್ಯೂಟ್‌ನಲ್ಲಿ ನಮ್ಮ ರಾಜ್ಯ ಸರ್ಕಾರಕ್ಕೆ ಒಂದು ಜವಾಬ್ದಾರಿ ಇದೆ. ಯೂನಿಯನ್ ಗವರ್ನಮೆಂಟ್ ಲೆಕ್ಕದಲ್ಲಿ ಮ್ಯಾನೇಜ್‌ಮೆಂಟ್ ಲೆಕ್ಕದಲ್ಲಿ, ವರ್ಕರ್ಸ್ ಲೆಕ್ಕದಲ್ಲಿ ಈ ವಿವಾದದ ಇತ್ಯರ್ಥದ ಬಗ್ಗೆ ಕಾನೂನು ಪ್ರಕಾರ ಸ್ಟೇಟ್ ಗವರ್ನಮೆಂಟ್ ಜವಾಬ್ದಾರಿ ಇದೆ. ಈ ಜವಾಬ್ದಾರಿ ಪ್ರಕಾರ ಸ್ಟೇಟ್ ಗೌವರ್ನಮೆಂಟ್ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಆದುದರಿಂದ ಮಾನ್ಯ ಮುಖ್ಯ ಮಂತ್ರಿಗಳ ನೇತೃತ್ವದಲ್ಲಿ ಈ ನಿಯೋಗ ಹೋದರೆ, ಅವರು ಸಭೆಯ ನಾಯಕರೂ, ಸರ್ಕಾರದ ಮುಖ್ಯಸ್ಥರೂ, ಆಗಿರುವುದರಿಂದ ಅವರ ಒಂದು ಪೊಸಿಷನ್, ಸರ್ಕಾರದ ಒಂದು ಪೊಸಿಷನ್ ಅನ್ನು ನಾವು ಕೆಳಗೆ ಮಾಡುವುದು ಸರಿಯಲ್ಲ. ಅದು ಮಾತ್ರವಲ್ಲದೆ ಏನು ಒಂದು ಸರ್ಕಾರದ ಜವಾಬ್ದಾರಿ ಇದೆ ಅದನ್ನು ಬಿಟ್ಟುಬಿಟ್ಟು ನಾವು ಮ್ಯಾನೇಜ್‌ಮೆಂಟಿನ ಹತ್ತಿರ ಹೋಗುವುದು ಸರಿಯಲ್ಲ ಎನ್ನುವ ದಿಕ್ಕಿನಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು ಪೇಳಿದ್ದಾರೆ.

ಇನ್ನೊಂದು ವಿಚಾರ ಪೇಳಬೇಕಾಗಿದೆ. ಅದು ಏನೆಂದರೆ ಈ ವಿಷಯದಲ್ಲಿ ಇದರ ಬಗ್ಗೆ ರಾಜಕೀಯದ ಒಂದು ಪ್ರಶ್ನೆಯೇ ಇಲ್ಲ. ನಿನ್ನೆ ನಾವು ಎಲ್ಲಾ ಎಂ.ಎಲ್.ಎ.ಗಳೂ ಕೂಡಿಯೇ, ಲೇಬರ್ ಲೀಡರ್ಸ್ ಯಾರೇ ಇರಲಿ ಎಲ್ಲಾ ಒಂದಾಗಿಯೇ ನಿನ್ನೆಯ ದಿವಸ ಆದ ಹಲ್ಲೆಯ ಬಗ್ಗೆ ಮಾನ್ಯ ಪ್ರಧಾನ ಮಂತ್ರಿಗಳವರ ಗಮನವನ್ನು ಸೆಳೆಯುವುದಕ್ಕಾಗಿ ಒಂದು ಟೆಲಿಗ್ರಾಂನ್ನು ಸಹ ಕಳುಹಿಸಿ ಕೊಟ್ಟಿದ್ದೇವೆ. ಅದಕ್ಕೆ ನಾವು ಎಲ್ಲರೂ ಸಹಿ ಹಾಕಿದ್ದೇವೆ, ಇದರಲ್ಲಿ ರಾಜಕೀಯ ಮಾಡಬೇಕೆಂದು ಏನೂ ಇಲ್ಲ. ಆದುದರಿಂದ ಇದು ವಿರೋಧ ಪಕ್ಷದ ನಾಯಕರಿಗೆ ಬಿಟ್ಟದ್ದು, ಅವರಿಗೆ ಬಿಟ್ಟಿದ್ದು ಅವರಿಗೆ ಬಿಟ್ಟಿದ್ದು ಎಂದು ಹೇಳುವಂಥಾ ಪ್ರಶ್ನೆ ಇಲ್ಲ. ಇದರಲ್ಲಿ ಕಾನೂನಿನ ತೊಡಕಿದೆ. ಕಾನೂನಿನ ಪ್ರಶ್ನೆಯನ್ನು ಸಹ ಸರ್ಕಾರದವರು ಕೂಡ ಆಲೋಚನೆ ಮಾಡಬೇಕಾಗಿದೆ. ಆದುದರಿಂದ ಇದನ್ನು ಕಾನೂನು ಪ್ರಕಾರವಾಗಿ ಬಗೆಹರಿಸುವ ಅಗತ್ಯವಿದೆಯೆಂದು ಮಾತ್ರ ಒತ್ತಾಯ ಮಾಡುತ್ತೇನೆ.

(ಗೊಂದಲ)

SRI B. B. SAYANAK (Belaguam).—Mr. Deputy Speaker Sir, since yesterday, I am listening the debate with regard to the public sector workers' strike in the form of an Adjournment Motion. The strike is going on for the last seventy-one days. The issue of the strike is in between the Centre and the workers Now, it has created a very critical situation. The party at the Centre and the Workers have made it a prestige issue. It has nothing to do with the Chief Minister of Karnataka. In spite of that fact, the Hon. Chief Minister-Sri Gundu Rao went twice to Delhi and has requested the Hon. Prime Minister to intervene in the matter and solve the issue. So far, the issue has not been solved. The Prime Minister is again and again saying that 'the problems will not be solved by way of an agitation'. To this, I must say. only when there is an agitation, the Centre is going to take a decision and not otherwise. The workers are on strike for the last 71 days. They are in grave financial difficuities. They have given up all their earlier conditions Now, they are demanding for an increase of Rs. 25 only. Yesterday whatever the Leader of the Opposition has said, I would like to ask him categorically, what is his categorical suggestion, who was heading the State for the last seven years ? Yesterday he said 'Do not direct me'. I am not a man to direct the Leader of the Opposition. But, if he has accepted the suggestion of the Opposition Janata Party Leader Sri Devegowda, Sri Bommai and Sri Arumugham that All-Party Delegation should be taken to the Prime Minister by

the Chief Minister to solve the issue, I request the Hon. Chief Minister to call all the leaders of the Opposition parties from both the Houses as well as the Union Leaders in the Chamber, let us discuss this issue and then the Hon. Chief Minister may lead the delegation of All-Party Leaders to the Prime Minister to thrash out the problem. We do not want an agitation and we should not give any scope to anybody to do so. That is all my submission Sir.

ಶ್ರೀ ಕೆ. ಬಿ. ಶಿವಯ್ಯ (ಸಂಜನಗೂಡು).—ಅಧ್ಯಕ್ಷರೇ, ಎಲ್ಲಾ ಮಾನ್ಯ ಸದಸ್ಯರುಗಳೂ ಕೂಡ ಇಲ್ಲಿ ಸಲಹೆಗಳನ್ನು ಕೊಡುವುದಕ್ಕೆ ಸರಿಸಮಾನವಾದ ಪಕ್ಕ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ವಿರೋಧ ಪಕ್ಷದ ನಾಯಕರವರು ತಮ್ಮ ಒಂದು ವಿಜ್‌ಡಂನಲ್ಲಿ ಒಂದು ಸಲಹೆಯನ್ನು ಕೊಟ್ಟರು. ಆ ಸಲಹೆಯನ್ನು ಸರ್ಕಾರದವರು ಬೇಕಾದರೆ ಸ್ವೀಕರಿಸಬಹುದಾಗಿತ್ತು, ಇಲ್ಲವೇ ತಿರಸ್ಕರಿಸಬಹುದಾಗಿತ್ತು. ಆಗಲೇ ತಾವಾದರೂ ಸಹ ಆದರ ಬಗ್ಗೆ ಒಂದು ತೀರ್ಪನ್ನು ಕೊಡಬಹುದಾಗಿತ್ತು. ಆಗ ಮಾನ್ಯ ಮುಖ್ಯ ಮಂತ್ರಿಗಳವರೂ ಸಹ ಒಂದು ತೀರ್ಮಾನ ಕೊಡಲಿಲ್ಲ, ಅವರು ಹಾಗೆ ಹೇಳಿ ಹೊರಟು ಹೋದರು. ಇವರು ಏನೂ ಹೇಳದೇ ಹೊರಟು ಹೋದರು. ಆದುದರಿಂದ ಇವತ್ತು ವಿರೋಧ ಪಕ್ಷದ ನಾಯಕರವರು ಇಲ್ಲದ ಸಮಯದಲ್ಲಿ ಈ ರೀತಿ ಆಪಾದನೆ ಮಾಡುವುದು ಸರಿಯಲ್ಲ ಇದರಿಂದ ಸಭೆಯನ್ನು ತಪ್ಪು ದಾರಿಗೆ ಎಳೆದ ಹಾಗಾಗುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರವರು ತಮ್ಮ ಅಭಿಪ್ರಾಯವನ್ನು, ಸಲಹೆಯನ್ನು ಕೊಟ್ಟಿದ್ದಾರೆ. ಕಾರ್ಮಿಕರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ನಿಮಗೆಷ್ಟು ಕಾತುರತೆ ಇದೆಯೋ ನಮಗೂ ಅಷ್ಟೇ ಕಾತುರತೆ ಇದೆ. ನಿಮ್ಮ ಅಧಿಕಾರವನ್ನು ಚಲಾಯಿಸಲಿಕ್ಕೆ ಹಕ್ಕು ಇದೆ, ಚಲಾಯಿಸಿ ಎಂದು ಹೇಳಿದರು. ಇವರು ಏನು ಹೇಳುತ್ತಿದ್ದಾರೆಂದರೆ 'ಕಾಣಿಯಲಾರದ ಸೂಳೆಗೆ ನೆಲ ಡೊಂಕು' ಅಂದ ಹಾಗೆ.....

೧೦-೩೦ ಎ.ಎಂ.

ಕು॥ ಎಸ್. ಪ್ರಮೀಳ.—ಈ ರೀತಿ ಮಾತನಾಡುವುದು ಸರಿಯಲ್ಲ. ಬಾಯಿಗೆ ಬಂದ ಹಾಗೆ ಏನು ಬೇಕಾದರೂ ಗಾದೆ ಹೇಳಬಹುದೇ ?

(ಗೊಂದಲ)

ಶ್ರೀ ಆಜೀಜ್ ಸೇಠ್.—ಮಾನ್ಯ ಶಿವಯ್ಯನವರು ಹೇಳಿದ್ದು ಸರಿಯಲ್ಲ.

ಕು॥ ಎಸ್. ಪ್ರಮೀಳ.— ಮಾತನಾಡುವಾಗ ಸ್ವಲ್ಪ ವಿವೇಚನೆಯಿಂದ ಮಾತನಾಡಬೇಕು. ಮಾತನಾಡುವಾಗ ಸಭೆಯ ಗೌರವವನ್ನೂ ಕಾಪಾಡಬೇಕು.

ಶ್ರೀ ಪಿ. ರಾಮದೇವ್.—ಮಾನ್ಯ ಮುಖ್ಯಮಂತ್ರಿಗಳ ಮಾತನ್ನು ಕೇಳಿದ ಮೇಲೆ ಆಲಿಗೇಷನ್ ಅನ್ನು ವಾಪಸ್ಸು ತೆಗೆದುಕೊಂಡಿದ್ದೇವೆ. ಅಂತೆಯೇ ಮುಷ್ಕರ ನಿರತ ಕಾರ್ಮಿಕರನ್ನು ಕಾಲ್ ಆಫ್ ಮಾಡಿ ಅವರ ಮುಖಂಡರೊಡನೆ ಮಾತುಕತೆ ನಡೆಸಿ ಒಂದು ಸಂಧಾನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಶ್ರೀಮತಿ ಇಂದಿರಾ ಗಾಂಧಿಯವರು ಬಂದಾಗ ಅವರಿಗೆ ಈ ಬಗ್ಗೆ ಮತ್ತೊಮ್ಮೆ ಮನವಿ ಮಾಡಿಕೊಳ್ಳಬೇಕು. ಇಲ್ಲದಿದ್ದರೆ, ಈ ಸಭೆ ನಪಯುವವರೆಗೆ ಈ ವಿಚಾರ ಬರುತ್ತಿರುತ್ತದೆ. ಏಕೆಂದರೆ, ಇವತ್ತಿನ ದಿವಸ ಮಕ್ಕಳು ಶಾಲೆಗಳಿಗೆ ಹೋಗುತ್ತಿಲ್ಲ. ಅವರಿಗೆ ಪರೀಕ್ಷೆಗೆ ಫೀಜ್ ಕಟ್ಟಲು ಮುದ್ದಿಲ್ಲ.

(ಗೊಂದಲ)

ಶ್ರೀ ಪಿ. ರಾಮದೇವ್.—ಸುಮಾರು ೭೦ ಸಾವಿರ ಜನ ಬೀದಿಯಲ್ಲಿರುವಾಗ ಸಮಸ್ಯೆನೆ ಕೂರುವುದ ಕ್ಕಾಗುತ್ತದೆಯೇ ? ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಮಾತಿಗೆ ಒಪ್ಪಬೇಕಾದರೆ ರಾಜಕೀಯ ಮಾಡಬಾರದು, ಮತ್ತು ಪ್ರೀ ಕಂಡೀಷನ್ ಹಾಕಬಾರದೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಆರ್. ಗುಂಡೂರಾವ್ —ಅಧ್ಯಕ್ಷರೇ, ಈ ವಿಷಯ ಇವತ್ತು ನಮ್ಮ ಮುಂದೆ ಇರಲಿಲ್ಲ. ಇದರ ಬಗ್ಗೆ ನಿನ್ನೆಯೇ ಒಂದು ತೀರ್ಮಾನವಾಗಿತ್ತು. ಇವತ್ತು ಮಾನ್ಯ ಆರ್ಮುಗಂರವರು ಪುನ: ಈ ವಿಷಯವನ್ನು ಸಭೆಯ ಮುಂದೆ ತಂದಿದ್ದಾರೆ. ಈ ಸಂದರ್ಭದಲ್ಲಿ ಮಾನ್ಯ ಆಜೀಜ್ ಸೇಟ್‌ರವರು ಹೊರಗೆ ಹೋಗುವುದು ತರವಲ್ಲ.

SRI AZEEZ SAIT.—I would suggest two things. If the Hon'ble Chief Minister is honest, sincere, let him direct the Government to refer the matter for adjudication or arbitration. That is the end of the matter. If that is done, he will be doing greater justice. There should be no politics involved in this issue. One party wants to go on delegation and another does not. I firmly stand by my leader. Let the matter be referred to adjudication or arbitration, without any pre-condition.

ಶ್ರೀ ಆರ್. ಗುಂಡೂರಾವ್.—ಮಾನ್ಯ ಆರ್ಮುಗಂರವರು, ಈ ವಿಷಯವನ್ನು ಮಾನವೀಯತೆಯ ದೃಷ್ಟಿಯಿಂದ, ರಾಜ್ಯದ ಒಂದು ಅಭಿವೃದ್ಧಿಯ ದೃಷ್ಟಿಯಿಂದ ಹಾಗೂ ೮೯ ಸಾವಿರ ಮಂದಿ ಕಾರ್ಮಿಕರ ಹಿತದೃಷ್ಟಿಯಿಂದ ತಂದು ಇದನ್ನು ಯಾವ ರೀತಿಯಲ್ಲಾದರೂ ಒಂದು ತೀರ್ಮಾನ ಮಾಡ ಬೇಕೆಂದು ನಮ್ಮ ಮುಂದೆ ಇಟ್ಟಿದ್ದಾರೆ. ಆಮೇಲೆ ಮಾನ್ಯ ದೇವೇಗೌಡರು ಮಂತ್ರಿತ್ವರರು ಮಾತನಾಡಿ ದ್ದಾಗ, ನಾನು ನಿನ್ನೆ ಈ ವಿಷಯದಲ್ಲಿ ಬಹಳ ಸ್ಪಷ್ಟವಾದ ಅಭಿಪ್ರಾಯವನ್ನು ವ್ಯಕ್ತ ಮಾಡಿದ್ದೇನೆ, ನಾನು ರಾಜಕೀಯವನ್ನು ಬೆರೆಸಲಿಲ್ಲ ಮತ್ತು ಇನ್ನಾವುದೇ ವಿಷಯವನ್ನು ಹೇಳಲಿಲ್ಲ. ಮಾನ್ಯ ದೇವೇಗೌಡರೇ ಹೇಳಿದ ಹಾಗೆ ಇವತ್ತಿನ ದಿವಸ ಲಕ್ಷಾಂತರ, ಕೋಟ್ಯಾಂತರ ಜನರು ನಮ್ಮ ದೇಶದಲ್ಲಿ, ತಿಂಗಳಿಗೆ ಕೇವಲ ೨೫-೩೦ ರೂಪಾಯಿ ಕೂಡ ಸಂಪಾದನೆ ಇಲ್ಲದೆ ಇರುವವರಿದ್ದಾರೆ. ಇಂಥ ಪರಿಸ್ಥಿತಿ ಯಲ್ಲಿ, ನಾನು ಒಂದೇ ಒಂದು ವಿಷಯವನ್ನು ಏನು ಹೇಳಿದೆ ಎಂದರೆ, ಈ ಸದನ ಒಪ್ಪುವುದಾದರೆ ಮತ್ತು ಆಸಕ್ತಿ ವಹಿಸುವುದಾದರೆ, ಆ ಕಾರ್ಮಿಕರಿಂದ ಈ ರಾಜ್ಯದಲ್ಲಿ ಕೆಲಸ ಆಗಬೇಕು, ಅವರು ವಾಪಸ್ಸು ಕೆಲಸಕ್ಕೆ ಹೋಗಬೇಕು ಮತ್ತು ಅವರ ಮಕ್ಕಳು ಚನ್ನಾಗಿ ಇರಬೇಕೆಂಬ ದೃಷ್ಟಿಯಿಂದ ಪ್ರತಿಯೊಬ್ಬರೂ ಪ್ರಾಪಂಚಿಕವಾಗಿ ವಿಷಯವನ್ನು ಮನಗಂಡು ಇದಕ್ಕೆ ಒಂದು ಪರಿಹಾರವನ್ನು ಕಂಡುಹಿಡಿಯಬೇಕು ಎಂದು. ಈ ಒಂದು ಅಂಶ ಸದನದ ಮುಂದೆ ಬಂದಾಗ, ಎಲ್ಲ ರಾಜಕೀಯ ಪಕ್ಷಗಳು ಸೇರಿ ಪ್ರಧಾನಿ ಯವರನ್ನು ಕಾಣೋಣ ಎಂಬ ಸಲಹೆಯನ್ನು ಮಾನ್ಯ ಸದಸ್ಯರು ಅನೇಕರು ಕೊಟ್ಟರು. ಏತಕ್ಕೋಸ್ಕರ ಹೀಗೆ ಹೇಳುತ್ತಾರೆಂದರೆ ಯಾವುದೇ ಕಂಡೀಷನ್ ಹಾಕದೆ ಇರಲಿ ಎಂದು. ಈ ಸಂದರ್ಭದಲ್ಲಿ, ಮುಖ್ಯ ವಾಗಿ ವಿರೋಧ ಪಕ್ಷದ ನಾಯಕರು ಇಲ್ಲ. ಎಲ್ಲೋ ಒಂದು ಸಾರಿ ಬರುತ್ತಾರೆ. ಹೊರಟುಹೋಗುತ್ತಾರೆಂಬ ಮಾತನ್ನು ನಿನ್ನೆ ಕೂಡ ನಾನು ಹೇಳಿದೆ. ಸರ್ಕಾರ ನಡೆಸುವಂತಹ ಪಕ್ಷಕ್ಕೆ ಅಷ್ಟೇ ಉತ್ಸಾಹದಿಂದ ವಿರೋಧ ಪಕ್ಷಗಳು ಸಹ ಸಹಕಾರವನ್ನು ಕೊಡಬೇಕು. ಸರ್ಕಾರ ತಪ್ಪು ದಾರಿಗೆ ಹೋದಾಗ ಅದನ್ನು ತೋರಿಸಿಕೊಡಬೇಕು. ವಿರೋಧ ಪಕ್ಷದ ನಾಯಕರಾದವರು ಸದನದ ಎಲ್ಲಾ ಮುಖ್ಯ ಕಾರ್ಯಕಲಾಪ ಗಳಲ್ಲೂ ಭಾಗವಹಿಸಬೇಕು. ರಾಜ್ಯದ ಮುಖ್ಯಮಂತ್ರಿಗಳಿಗೆ ಎಷ್ಟು ಜವಾಬ್ದಾರಿ ಇದೆಯೋ ಅಷ್ಟೇ ಜವಾಬ್ದಾರಿಕೆ ಈ ರಾಜ್ಯದ ವಿರೋಧ ಪಕ್ಷಕ್ಕೆ ಹಾಗೂ ವಿರೋಧ ಪಕ್ಷದ ನಾಯಕರಿಗೆ ಇರುತ್ತದೆ. They cannot shirk out responsibility, Suppose, I am absent for a day, many questions will arise ? We are answerable, accountable to the people. The Opposition party and the leader is also equally answerable, accountable to the House. As the Leader of the Opposition, he should try to see that he is present in the House in the interest of the opposition, in the interest of the democracy. We are 170 members and can we rule ourselves ? We have to respect and show regard to the Opposition, the Leader of the Opposition. He must draw the attention of the treasury benches, the Leader of the House and we must all discuss the issues in this House together. The Leader of the Opposition came only at the end Yesterday. Sometimes, all debate that took place in this House cannot be transmitted to him. The person who conveys may be wrong in conveying the details of the debates. Unless he watches the speeches of all the Members, he may not be able to give constructive suggestions. Any suggestion

from the opposition side, whether it is from the Leader of the Opposition or from Sri Devegowda or from Bommai or from any other party, should be respected by us. Suddenly a suggestion was thrown by Sri Bommai and I knew nothing about it. When the suggestion was thrown, I thought we could discuss it. There is nothing wrong. Unfortunately, the Leader of the Opposition said that he does not want to be a 'Petitioner'. When several issues come before us, we have to become the petitioners. There is nothing wrong. If this is the case, why should he write a letter to the Prime Minister ? He has not written a letter to the Chief Minister of the State, because he knew that the matter has to be settled by the Prime Minister and I did not take any objection for that. It is not an issue of any politics here. I do not put the question as to why he should write to the Prime Minister. He also ruled the State for about seven years and he knows the responsibility of a Chief Minister. When Smt. Indira Gandhi was ruling in Delhi and when the same party was ruling in the State, I do not recollect any instance when she disagreed with the Chief Minister of Karnataka. But it should be understood, which is practicable and which is not practicable. Under the party system of the Government, which Chief Minister and which Party can take decisions overriding the decisions of the High Command and the Central Government? It is not possible. It will never be possible whether it is Janata party or Marxist Party or Socialist Party or whichever party which may come to power tomorrow. Any one can understand this easily. So, it is just you over rule; you summon the party. I want to know how many times the Central Government summoned this Government on the issues of Cauvery waters, Kasargod and Mahajan Commission. So many issues were there. I was the Minister for 6 years. Did at any time he attempt to overrule the decision? So, let us not make politics. He wrote a long letter to the Prime Minister stating "Please intervene; please see that this matter is settled in the interest of the workers." If he feels that writing a letter is a petition or taking a delegation is a petition, I must say, No. It is not a question of who is above. In the federal system of administration, we have to sit together and take decision. Under the constitution we are functioning. Yesterday, I saw a report regarding river water dispute. The Central Government wants to assume some powers. Suppose Cauvery Water dispute is there between the States of Karnataka, Tamilnadu, Kerala and Pondicherry, suppose the House feels that we have to go and approach the centre, can we say that we do not want to go ? It is not the question of individual personality and prestige. It is the interest of the State and the financial implications of the State. Suppose, a problem is there in K.G.F. and Sri Arumugham may belong to any party. He cannot say that he will not go as a peti-

tioner. He must be a petitioner. And petitioning is not insulting. It is an appeal and it is a request. Sri Lakshmisagar is sitting here. Day before yesterday some problems in respect of Corporation was there. They will all come to meet the Government. It is not the question whether they are meeting Gundu Rao. Gundu Rao is nothing. Gundu Rao is an ordinary citizen among 65 Crores of people of this country.

AN HON. MEMBER.—You are a Chief Minister.

SRI R. GUNDU RAO.—That is why I am telling that they are going to the Chief Minister. They are not meeting the person but they are meeting the authority. So, we have to meet the Prime Minister. As Sri Deve Gowda said, when Sri Veerendra Patil's Government was here and when so many issues come did we not go to them ?

SRI P. RAMDEV.—What he meant was, the Assembly should not be a petitioner.

SRI AZEEZ SAIT.—Each suggestion should be considered on merit. Cauvery Water dispute is a State matter.

SRI R. GUNDU RAO.—This public sector strike is also a State matter. It is not only in Karnataka. It is every where. That is the point. I put the same question to you. If you are genuinly feeling and if you are sincere to solve the problem, come on, let us thrash out the problem in a very cordial manner. Not by saying that : I won't be a petitioner, you won't be a petitioner and let me try to put the blame on the Government. This way, you will never achieve anything.

SRI AZEEZ SAIT.—Why not you take a decision ?

SRI R. GUNDU RAO. It is not I who has to take a decision. It is the House that has to take a decision. I would have taken a decision long back. It is the House that has to take a decision and in a very cordial manner and with an open mind, we have to discuss. That is why this issue has come today and we are interested to solve this problem. 70 days are over. Why did I simply agree to the suggestion. Afterall there are no elections tomorrow to mix any politics in to this issue. It is only a general thing which I said; we will all go. Some hon. members said, as a leader of the House, I have to lead the delegation, to that also I conceded.

ಶ್ರೀ ಜೆ. ಹೆಚ್. ಪಟೇಲ್.—ತಾವು ಒಂದು ನಿಮಿಷ ಕುಳಿತುಕೊಂಡರೆ.....

ಶ್ರೀ ಆರ್. ಗುಂಡೂರಾವ್.—ನೀವು ಈಗ ಬಂದಿರಿ. ನಿಮಗೆ ಏನು ನಡೆದಿದೆ ಎಂಬುದು ಗೊತ್ತಿಲ್ಲ. ದಯವಿಟ್ಟು ಸಭೆಯಲ್ಲಿ ಏನು ನಡೆದಿದೆ ಎಂಬುದನ್ನು ತಿಳಿದುಕೊಳ್ಳಿ.

ಶ್ರೀ ಜೆ. ಹೆಚ್. ಪಟೇಲ್.—ಅದನ್ನೇ (ಬಿ. ಸುಬ್ಬಯ್ಯ ಶೆಟ್ಟಿಯವರ ಪತ್ರವನ್ನು) ಕೇಳುತ್ತಿದ್ದೇನೆ.

ಶ್ರೀ ಆರ್. ಗುಂಡೂರಾವ್.—ಅವರೂ ಆರ್ಧದಲ್ಲಿ ಬಂದರು. ಶ್ರೀಮಾನ್ ಚೌಡಯ್ಯ ನವರನ್ನು ಬಿಟ್ಟರೆ ಎಲ್ಲರೂ ಈಗ ಬಂದವರೆ. ಆದ್ದರಿಂದ ಪೂರ್ತಿ ವಿಷಯ ನಿಮಗೆ ಗೊತ್ತಾಗುವುದಿಲ್ಲ ಎಂದೂ ಹೇಳುತ್ತಿದ್ದೇನೆ.

ಶ್ರೀ ಜೆ. ಹೆಚ್. ಪಟೇಲ್.—ನಿನ್ನೆ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ಬಗ್ಗೆ ತಾವು ಪ್ರಸ್ತಾಪ ಮಾಡುತ್ತಿದ್ದಿರಿ.

ಶ್ರೀ ಆರ್. ಗುಂಡೂರಾವ್,—ಅದು ಚರ್ಚೆಯಾಯಿತು.

ಶ್ರೀ ಜೆ. ಹೆಚ್. ಪಟೇಲ್.—ಚರ್ಚೆಯಾಯಿತು ಸರಿ. ಈಗಲೂ ತಮ್ಮ ಅಭಿಪ್ರಾಯದಲ್ಲಿ ಎರಡೂ ಸದನದ ಪ್ರತಿನಿಧಿಗಳು ತಮ್ಮ ನಾಯಕತ್ವದಲ್ಲಿ ದೆಹಲಿಗೆ ನಿಯೋಗ ಹೋಗುವುದರಿಂದ ಸಮಸ್ಯೆ ಬಗೆಹರಿಯುತ್ತದೆ ಎಂಬ ಉದ್ದೇಶವಿದ್ದರೆ ಆದರಲ್ಲಿ ಯಾರೂ ಪ್ರಿಸ್ಟೀಜ್ ಮೇಲೆ ನಿಲ್ಲುವುದಿಲ್ಲ ಎಂಬ ಮಾತನ್ನು ಸ್ಪಷ್ಟಪಡಿಸುತ್ತೇನೆ. ನಿನ್ನೆ ನಮ್ಮ ನಾಯಕರು ಹೇಳಿದ್ದು ಏನೆಂದರೆ ರಾಜ್ಯ ಸರ್ಕಾರಕ್ಕೆ ಕಾನೂನು ಪ್ರಕಾರ ಕೆಲವು ಅಧಿಕಾರ ಇದೆ. ತಾವು ಮ್ಯಾನೇಜ್‌ಮೆಂಟಿಗೆ ನಮ್ಮ ಮಾತನ್ನು ಕೇಳದಿದ್ದರೆ ಅಡ್ಜುಡಿಕೇಷನ್‌ಗೆ ಕಳಿಸುತ್ತೇವೆ ಎಂದು ಹೇಳಬಹುದು. ಕೇಂದ್ರ ಸರ್ಕಾರದ ಪರಿವೆಯಿಲ್ಲದೆ ಒಬ್ಬ ರಾಜ್ಯದ ಮುಖ್ಯಮಂತ್ರಿ ಹಾಗೆ ಮಾಡುವುದಕ್ಕೆ ಆಗುತ್ತದೆಯೇ ಎಂಬುದು ನಿಮ್ಮ ಪ್ರಾಕ್ಟಿಕಲ್ ತೊಂದರೆ. ಅದನ್ನು ನಾನು ಒಪ್ಪುತ್ತೇನೆ. ಹಿಂದೆ ಯಾರೂ ಮಾಡದೇ ಇರಬಹುದು ಅದು ಬೇರೆ ವಿಷಯ. ಮಾನ್ಯ ದೇವರಾಜ್ ಅರಸ್ ಅವರು ಹೇಳಿದ್ದಾರೆ ಹಿಂದೆ ಇದೇ ತರಹ ಸತ್ಯನಾರಾಯಣ ಸಿನ್ಹ ಅವರು ಕೇಂದ್ರ ಸರ್ಕಾರದ ಮಂತ್ರಿಯಾಗಿದ್ದಾಗ, ನಿಜಲಿಂಗಪ್ಪನವರು ಮುಖ್ಯಮಂತ್ರಿಯಾಗಿದ್ದು ದೇವರಾಜ್ ಅರಸು ಅವರು ಕಾರ್ಮಿಕ ಮಂತ್ರಿಗಳಾಗಿದ್ದಾಗ ಕೇಂದ್ರ ಸರ್ಕಾರದ ಡೈರೆಕ್ಟೀವ್ ವಿರುದ್ಧ ಅಡ್ಜುಡಿಕೇಷನ್‌ಗೆ ಕಳಿಸಿದ್ದೆ ಎಂದು ಪಾರ್ಟಿ ಮೀಟಿಂಗ್‌ನಲ್ಲಿ ಹೇಳಿದ್ದಾರೆ. ಆ ತರಹ ನೀವು ಮಾಡುವುದಾದರೆ ಮಾಡಿ. ಹಾಗೆ ಮಾಡದೆ ನಾನು ಪಿಟಿಷನರ್ ಆಗಿ ಬಂದು ನಿಂತುಕೊಳ್ಳುತ್ತೇನೆ ಎಂದರೆ, ಸಮಸ್ಯೆ ಬಗೆಹರಿಸುವುದಕ್ಕೆ ಯಾವುದಾದರೂ ಮಾರ್ಗದಲ್ಲಿ ಹೋಗುತ್ತೇನೆಂದರೆ ನಾವು ಬೆಂಬಲ ಕೊಡುವುದಕ್ಕೆ ತಯಾರಿಲ್ಲ ಎಂದು ಅವರು ಹೇಳಲಿಲ್ಲ. ಯಾವುದಾದರೂ ಒಂದು ಮಾರ್ಗವನ್ನು ಕಂಡುಹಿಡಿಯಿರಿ. ಇವತ್ತು ಒಂದಲ್ಲ ೭೦ ಸಾವಿರ ಕಾರ್ಮಿಕರ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ತಮಗೆಷ್ಟು ಕುತೂಹಲ ವಿದೆಯೋ ಅಷ್ಟೇ ಕುತೂಹಲ ನಮಗೂ ಇದೆ. ತಾವು ಮಾರ್ಗದರ್ಶನ ಮಾಡುವುದಾದರೆ ನಾವು ಸಹಕಾರ ಕೊಡುತ್ತೇವೆ. ಆದರೆ ಅವರು ಹೇಳಿದ್ದರ ಬಗ್ಗೆ ನೀವು ತಿರುಗಿ ಹೊಡೆಯುವಾಗ ಬೇರೆ ಬೇರೆ ನಮೂನೆ ಯಲ್ಲಿ ಹೊಡೆಯುತ್ತೀರಿ. ನಮಗೆ ತಳ, ಬುಡ, ಒಂದೂ ಗೊತ್ತಾಗುವುದಿಲ್ಲ.

ಶ್ರೀ ಆರ್. ಗುಂಡೂರಾವ್.—ನಿಮಗೆ ತುದಿಯೂ ಗೊತ್ತಿಲ್ಲ. ಬಾಲವೂ ಗೊತ್ತಿಲ್ಲ. ನನಗೆ ಎರಡೂ ಗೊತ್ತು.

Sri J. H. Patel.—So far as your Government and the State Government's position is concerned, he made it very clear. ತಾವು ಪೊಸಿಷನ್ ಆಸರ್ಟ್ ಮಾಡಿಕೊಳ್ಳುವುದಾದರೆ ಈಗಲೂ ಅದಕ್ಕೆ ಅವಕಾಶ ಇದೆ. ಅದನ್ನು ಆಸರ್ಟ್ ಮಾಡುವುದಕ್ಕೆ ಪ್ರಯತ್ನ ಮಾಡುವುದಕ್ಕಿಂತ ಮುಂಚೆ ಈ ಮಾರ್ಗದಲ್ಲಿ ಹೋಗುವುದಾದರೆ ಸಮಸ್ಯೆ ಬಗೆಹರಿಯಬಹುದೆ ಎಂದು ನೀವು ಹೇಳುವುದಾದರೆ ಅದಕ್ಕೆ ನಮ್ಮ ಅಭ್ಯಂತರವಿಲ್ಲ.

ಶ್ರೀ ಆರ್. ಗುಂಡೂರಾವ್.—ಕಾರ್ಮಿಕ ಇಲಾಖೆ, ಸರ್ಕಾರಕ್ಕೆ ಏನೇನು ಕಷ್ಟ ಇದೆ ಎಂಬು ದನ್ನು ಮಾನ್ಯ ಸದಸ್ಯರಾದ ಕಕ್ಕಿಲಾಯ ಅವರು ಹೇಳಿದರು ಬೇಕಾದಷ್ಟು ಸಮಸ್ಯೆ ಇದೆ, ಅದು ಬಗೆ ಹರಿಯುವುದಿಲ್ಲ, ಪ್ರಸಕ್ತ ಜಾಸ್ತಿಯಾಗುತ್ತದೆ, ಒಂದು ತೀರ್ಮಾನಕ್ಕೆ ಬರುವುದಕ್ಕಾಗುವುದಿಲ್ಲ. ಇದನ್ನೇ ಮಾನ್ಯ ಕಕ್ಕಿಲಾಯ ಅವರೂ ಹೇಳಿದರು. ಈ ತರಹ ಮಾಡುವುದರಿಂದ ಉತ್ತಮವಾದ ವಾತಾವರಣ ವನ್ನು ಕಲ್ಪಿಸಿದಂತಾಗುತ್ತದೆಂದು ತಾವು ಬರುವುದಕ್ಕೆ ಮೊದಲು ಹೇಳಿದರು. ಎಲ್ಲರ ಮನಸ್ಸಿನಲ್ಲೂ ಸಮಸ್ಯೆಯನ್ನು ಬಗೆಹರಿಸಬೇಕೆಂಬ ಅಭಿಪ್ರಾಯ ಇದೆ. ಈ ಚರ್ಚೆಯನ್ನು ಇಲ್ಲಿ ಮಾಡುವುದಕ್ಕಿಂತ ಎಲ್ಲ ವಿರೋಧಪಕ್ಷದ ನಾಯಕರನ್ನು, ರಾಜಕೀಯ ಪಕ್ಷದವರನ್ನು ಕರೆಸಿ ಹೊರಗೆ ಚರ್ಚೆ ಮಾಡೋಣ, ಆಮೇಲೆ ಕಾರ್ಮಿಕ ನಾಯಕರನ್ನು ಮತ್ತು ಯಾರು ಯಾರು ಪ್ರಮುಖರಿದ್ದಾರೋ ಅವರನ್ನು ಕರೆಸಿ ತೀರ್ಮಾನ ತೆಗೆದುಕೊಳ್ಳೋಣ ಎಂಬ ಸಲಹೆ ನಿನ್ನೆ ಬಂತು. ಮಾನ್ಯ ದೇವೇಗೌಡರು ಈ ಸಲಹೆಯನ್ನು ಕೊಟ್ಟಿದ್ದಾರೆ. ಈಗ ಮುಷ್ಕರ ಪ್ರಾರಂಭವಾಗಿ ೭೨ ದಿವಸಗಳು ಆಗಿಹೋಗಿವೆ. ಈಗಲೂ ಮುಷ್ಕರ

ವರೆಂದುವರೆಯಂತ್ತಿದೆ. ಈ ಮುಷ್ಕರವನ್ನು ನಿಲ್ಲಿಸದೇಹೋದರೆ ಯಾವುದೇ ಮಾತುಕತೆಯಿಂದ ಕಾರ್ಮಿಕರಿಗೆ ಲಾಭ ಇಲ್ಲ. ೭೦-೮೦ ಸಾವಿರ ಕಾರ್ಮಿಕರನ್ನು ಯಾರೂ ಸೇರಿಸುವುದಕ್ಕೆ ಆಗುವುದಿಲ್ಲ. ಇವತ್ತು ನಡೆದಿರುವ ಕಾರ್ಮಿಕರ ಸಭೆಗಳಲ್ಲೆಲ್ಲಾ ೫ ಸಾವಿರಕ್ಕಿಂತ ಹೆಚ್ಚು ಜನರು ಸೇರಿಲ್ಲ. ಎಲ್ಲೂ ಕೂಡ ೫ ಸಾವಿರಕ್ಕಿಂತ ಹೆಚ್ಚು ಜನರು ಸೇರಿದ ಕಾರ್ಮಿಕರ ಸಭೆ ನಡೆದಿಲ್ಲ. ನಿಜವಾಗಿ ಹೇಳಬೇಕೆಂದರೆ.....

ಶ್ರೀ ಪಿ. ರಾಮದೇವ್.—ಚಿಕ್ಕಲಾಲ್‌ಬಾಗಿನಲ್ಲಿ ೫೦-೪೦ ಸಾವಿರ ಜನ ಸೇರಿದ್ದರು.

ಶ್ರೀ ಆರ್. ಗುಂಡೂರಾವ್.—ಆ ತರಹ ಸ್ಯಾಟಿಸ್‌ಫ್ಯಾಕ್ಷನ್ ಮಾಡಿಕೊಳ್ಳಬೇಕೆಷ್ಟೆ. ಪ್ರಾಮಾಣಿಕವಾಗಿ ಹೇಳಬೇಕೆಂದರೆ ಅಷ್ಟು ಜನ ಸೇರುತ್ತಿಲ್ಲ. ಏತಕ್ಕೆ ಸೇರುತ್ತಿಲ್ಲ ? ಮನಸ್ಸಿಲ್ಲವೆ ? ಆ ಪ್ರಶ್ನೆ ಈಗ ಬರುತ್ತಿಲ್ಲ. ಪರಿಸ್ಥಿತಿ ಹಾಗಿದೆ. ಯಾರೂಒಂದು ಕಡೆ ಇಲ್ಲ. ಎಲ್ಲೆಲ್ಲೋ ಇದ್ದಾರೆ. ಅವರು ಬರುವುದಕ್ಕೆ ಬಸ್ಸುಗಳ ಅನುಕೂಲವಿಲ್ಲ. ಕೆಲವರು ಈ ಕೆಲಸ ಬಿಟ್ಟು ಹಂಗಾಮಿ ಕೆಲಸಗಳಿಗೆ ಹೋಗುತ್ತಿದ್ದಾರೆ. ಪ್ರತಿಯೊಬ್ಬರಿಗೂ ಜೀವನ ನಡೆಯು ಬೇಕಲ್ಲವೆ ? ಪರಿಸ್ಥಿತಿ ಕಷ್ಟ ಇದೆ. ಚಿಕ್ಕಲಾಲ್‌ಬಾಗ್‌ನಲ್ಲಿ ಸಭೆ ಕರೆದರೆ ಆರವತ್ತು ಸಾವಿರ ಜನ ಕಾರ್ಮಿಕರೂ ಬರುವುದಕ್ಕೆ ಸಾಧ್ಯವಿಲ್ಲ. ಕೆಲವು ಜನ ಬರಬಹುದು. ನಾನು ಹೋದ ಕಡೆಗಳಲ್ಲೆಲ್ಲ ಅನೇಕ ಜನ ನನ್ನ ಹತ್ತಿರ ಬಂದು ಹೇಳಿದ್ದಾರೆ ; ನಾನು ಮೊನ್ನೆ ದಿವಸ ದೇವಸ್ಥಾನವೊಂದಕ್ಕೆ ಪೂಜೆ ಮಾಡಿಸಲಿಕ್ಕೆ ಹೋಗಿದ್ದೆ. ಅಲ್ಲಿಗೆ ಬಂದಿದ್ದ ಕೆಲವು ಕಾರ್ಮಿಕರು, ಕೆಲಸವಿಲ್ಲದೆ ಬಹಳ ತೊಂದರೆಯಾಗಿದೆ ಎಂದೂ, ಕೆಲಸಕ್ಕೆ ಹೋಗುವ ರೀತಿ ಮಾಡಬೇಕೆಂದೂ ನನಗೆ ಹೇಳಿಕೊಂಡರು. ಆದುದರಿಂದಲೇ, ಒಂದು ಒಳ್ಳೆಯ ವಾತಾವರಣಕ್ಕೆ ಬರಬೇಕೆಂದು ನಾನು ಹೇಳುತ್ತಿರುವುದು. ಆದರೆ, ಕಾರ್ಮಿಕ ಸಾಯಕರಿಗೆ ಕಾರ್ಮಿಕರಿಗಿಂತಲೂ ಬಹಳ ಕಷ್ಟವಿದೆ. ನಾನು ಈ ಮಾತನ್ನು ಬಿಚ್ಚು ಮನಸ್ಸಿನಿಂದ ಹೇಳುತ್ತಿದ್ದೇನೆ. ಮುಷ್ಕರ ಹೂಡಿದ್ದಾಗಿದೆ ; ವಾಪಸ್ಸು ಹೋಗಿ ಎಂದು ಹೇಳುವುದು ಹೇಗೆ ? ಎಂದು ಕಾರ್ಮಿಕ ಮುಖಂಡರ ಭಾವನೆ ಇದೆ ; ಅವರಿಗೂ ಕಷ್ಟವಿದೆ. ಇಂತಹ ಸಂದರ್ಭಗಳನ್ನೇ ಎದುರು ಯೂನಿಯನ್‌ಗಳು ಕಾಯುತ್ತಿರುತ್ತಾರೆ. ಸಿ.ಪಿ.ಎಂ.ನವರಾಗಲೀ, ಇನ್ನೊಬ್ಬರಾಗಲೀ— ಬಂಗಾಳದಲ್ಲಿ ನಮ್ಮವರೇ ಮುಖ್ಯ ಮಂತ್ರಿ ಇದ್ದಾರೆ ; ಕೇರಳದಲ್ಲಿ ನಮ್ಮವರೇ ಮುಖ್ಯ ಮಂತ್ರಿ ಇದ್ದಾರೆ.....What Mr. Arumugham, they used to say like that. ನಾವಾಗಿದ್ದಾಗ ಸಮಸ್ಯೆಯನ್ನು ಬಗೆಹರಿಸಿಬಿಡುತ್ತಿದ್ದೆವು ; ನಿಮ್ಮ ಕೈಯಲ್ಲಿ ಆಗಲಿಲ್ಲ ಎಂದು ಹೇಳುತ್ತಾರೆ. ಇದೇ ಒಡೆದು ಆಳುವ ತತ್ವ. ಆ ರೀತಿ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗುವುದಿಲ್ಲ. ಆದುದರಿಂದ, ಕಾರ್ಮಿಕರು ಮೊದಲು ಸತ್ಯಾಗ್ರಹವನ್ನು ನಿಲ್ಲಿಸಬೇಕೆಂದು ಹೇಳುತ್ತೇನೆ. ಕಾರ್ಮಿಕರ ಬಗ್ಗೆ ಈ ಸದನದ ಸದಸ್ಯರು ಕಳಕಳಿಯನ್ನು ವ್ಯಕ್ತ ಮಾಡಿದ್ದಾರೆ ; ಸಹಕಾರದ ಹಸ್ತವನ್ನು ನೀಡುತ್ತೇವೆಂದು ಮುಂದೆ ಬಂದಿದ್ದಾರೆ. ಇದರ ಸದವಕಾಶವನ್ನು ಕಾರ್ಮಿಕರು ಪಡೆದು ತಮ್ಮ ಪಾಡಿಗೆ ತಾವು ಕೆಲಸಕ್ಕೆ ಹೋಗ ಬೇಕು. ಮಾನ್ಯ ದೇವೇಗೌಡರು ಮತ್ತು ಅರುಮುಗಂ ಅವರು ಹೇಳಿದ ಹಾಗೆ ಸರ್ವಪಕ್ಷೀಯ ನಿಯೋಗ ಪೊಂದು ಹೋಗಬೇಕೆಂದರೆ No authority can say that it will be all right and that you are something like a petitioner. No. Nobody can say that in a democratic system, when all party delegation is going to meet the highest authority of this country, Nobody will say this "why did you go" ? There is respect for the Chief Minister's delegation. Atmosphere will be clear and these people can go to work. There will be healthy atmosphere ; their children can go to schools and their womenfolks go to their work and other workers can go to their respective factories.

ಶ್ರೀ ಪಿ. ರಾಂದೇವ್.—ತಮ್ಮ ಮಾತಿಗೆ ಬೆಲೆ ಕೊಟ್ಟು ಕಾರ್ಮಿಕರು ಹೋರಾಟವನ್ನು ನಿಲ್ಲಿಸಿದ್ದಾರೆ. ಇಲ್ಲಿ ಹೋರಾಟವೇ ಬೇರೆ, ಮುಷ್ಕರವೇ ಬೇರೆ.

ಶ್ರೀ ಆರ್. ಗುಂಡೂರಾವ್.—ಹೋರಾಟ ನಿಲ್ಲಿಸುವುದರ ಪರಿಣಾಮವೇನು ? ನಾವೂ ನೀವೂ ಇಲ್ಲಿ ಅವರ ಬಗ್ಗೆ ಮಾತನಾಡುವ ಪ್ರಮೇಯವಿರುವುದಿಲ್ಲ, ಅಷ್ಟೆ. ಹೋರಾಟವೆಂದರೆ ಹಿಂಸೆ, ಗೋಳಿ ಬಾರ್ ಆಯಿತು. ಏತಕ್ಕಾಯಿತು ಎಂದು ನಾವು ಹಿಂದೆ ಚರ್ಚೆ ಮಾಡಲಿಲ್ಲವೇ ? ಹೌದು, They called off the agitation, I appreciated it. Agitation is different,

Here I discussed with them as the Chief Minister. I called them and spent about 3 to 5 hours. They also know where they stand, where we stand and where the Government stands. The know the whole thing. There is no hide and seek in this matter. We will discuss and we will go as a delegation. ಇಲ್ಲದೆ ಹೋದರೆ ಈ ಸಮಸ್ಯೆಗಳು ಬಗೆಹರಿಯುವುದು ಕಷ್ಟವಾಗುತ್ತದೆ. Ask Sri Kakkilaya also ; they also want that something is settled. They are not prepared to continue the strike. Different unions are involved in this. When the House is taking a decision, they can call their people-even if they meet jointly, about 5000 may attend the number is not important ; they can convince them saying, "look, the Assembly has taken the responsibility ; there is nothing political ; all the party leaders have taken a decision ; they are sorting out this matter ; In the interest of the State and in your own interests, you call off the strike ; we will entrust the responsibility to them ; since all the political leaders are there, they will safeguard your interest" It is not the question of who is getting the majority. It is not the question of who is getting the credit. We will leave this matter and we will go for the work. No prestige is involved." ಹೀಗೆ ಮುಷ್ಕರ ಮುಂದುವರೆದರೆ ಕಾರ್ಮಿಕರಲ್ಲಿ ಆಶಾಭಂಗವುಂಟಾಗುತ್ತದೆ. ಆದರ ಪರಿಣಾಮವಾಗಿ ಗಲಾಟೆ ಪ್ರಾರಂಭವಾಗುತ್ತದೆ. ಕೆಲವರು ಟೀಕೆ ಮಾಡುತ್ತಾರೆ ; ಕೆಲವರು ಕಲ್ಲು ಹೊಡೆಯುತ್ತಾರೆ. ನಿನ್ನೆ ಹನ್ನೊಂದು ಗಂಟೆ ಸಮಯದಲ್ಲಿ ಎರಡು ಬಸ್ಸುಗಳಿಗೆ ಕಲ್ಲು ಹೊಡೆದಿದ್ದಾರೆ. ಹೊಡೆದವರಾರೆಂದು ಗೊತ್ತಾಗಿಲ್ಲ. ಬಸ್ಸುಗಳ ಗಾಜುಗಳು ಪುಡಿ ಪುಡಿಯಾಗಿವೆ. ಯಾರ ಮೇಲೆ ನಾವು ಕ್ರಮ ತೆಗೆದುಕೊಳ್ಳೋಣ ?

ಶ್ರೀ ಅಜೀಜ್ ಸೇಠ್.—ನನಗೊಂದು ಅನುಮಾನ ಬರುತ್ತಿದೆ. ನಾವು ನಿಯೋಗ ಹೋಗೋಣ. ಆದರೆ, ತಾವು ಎರಡು ಸಲ ಹೋಗಿ ವಿಫಲರಾಗಿ ಬಂದಂತೆ ನಿಯೋಗವೂ ಹೋಗಿ ವಿಫಲವಾಗಿ ಬಂದರೆ, ಅದಕ್ಕೆ ಯಾರು ಜವಾಬ್ದಾರರಾಗುತ್ತಾರೆ ?

ಶ್ರೀ ಆರ್. ಗುಂಡೂರಾವ್.—ಅದನ್ನು ನಾವು ಈಗಲೆ ಏತಕ್ಕೆ ಯೋಚನೆ ಮಾಡೋಣ ?

ಶ್ರೀ ಅಜೀಜ್ ಸೇಠ್.—ಅಕಸ್ಮಾತ್ ತಮ್ಮ ನಾಯಕತ್ವದಲ್ಲಿ ನಿಯೋಗ ಹೋಗಿ ವಿಫಲವಾದರೆ ತಾವು ಧೈರ್ಯ ಮಾಡಿ ಇದನ್ನು arbitration or adjudication ಗೆ ವಹಿಸುವುದಕ್ಕೆ ಒಪ್ಪಿಕೊಳ್ಳುತ್ತೀರಾ ?

ಶ್ರೀ ಆರ್. ಗುಂಡೂರಾವ್.—ಅದೇನೋ ಗಾದೆ ಹೇಳಿದ ಹಾಗೆ "ಹೋಗುವುದಕ್ಕೆ ಮೊದಲೇ..." ಏನು ಮಾಡಿದಿರಿ ಎಂದು ಕೇಳಿದರೆ ಹೇಗೆ ? ಈಗಿನ್ನೂ ಕಾಲಾವಕಾಶ ಮೀರಿಲ್ಲ. I am prepared to call the meeting of the leaders of the opposition parties and all political parties like Mr. Arumugham, Mr. Sayanak and Mr. Kakkilaya.

ಶ್ರೀ ಜೆ. ಹೆಚ್. ಪಟೇಲ್.—ವಿರೋಧಪಕ್ಷದವರನ್ನೂ ಮತ್ತು ಜಂಟಿ ಕ್ರಿಯಾ ಸಮಿತಿಯವರನ್ನು ಕರೆದು ಮಾತನಾಡಿ ಯಾವುದಾದರೊಂದು ಗೌರವಯುತ ತೀರ್ಮಾನಕ್ಕೆ ಬಂದನಂತರ ದೆಹಲಿಗೆ ಹೋಗಬೇಕೆಂಬ ಅಭಿಪ್ರಾಯವಿದೆ. ಆದರೆ, ಮುಷ್ಕರದ ಕರೆಯನ್ನು ಹಿಂದಕ್ಕೆ ಪಡೆಯುವುದು ಜಂಟಿ ಕ್ರಿಯಾ ಸಮಿತಿಗೆ ಬಿಟ್ಟಿದ್ದು : ನಾವದನ್ನು ಪ್ರಸ್ತಾಪ ಮಾಡುವುದಿಲ್ಲ.

ಶ್ರೀ ಆರ್. ಗುಂಡೂರಾವ್.—ಇಲ್ಲ. ಆದನ್ನು ಮಾನ್ಯ ಬೊಮ್ಮಾಯಿ ಮತ್ತು ದೇವೇಗೌಡರು ಸ್ಪಷ್ಟೀಕರಿಸಿದ್ದಾರೆ. ಜಂಟಿ ಕ್ರಿಯಾ ಸಮಿತಿಯವರು ಈ ಬಗ್ಗೆ ಏನು ಹೇಳುತ್ತಿದ್ದಾರೆನ್ನುವುದನ್ನೂ ಅವರು ಹೇಳಿದ್ದಾರೆ.

I will call all the leaders of the Opposition parties. I am not calling J.A.F. people. That is not my business. I will call all leaders of various parties in the Assembly and in the Council. We can meet and discuss. We can work out a formula. If at that meeting we comes to a certain understanding, then we can think of what we should do in future. That is all I can assure you, because the matter has come before this House.

ಶ್ರೀ ಪಿ. ರಾಂದೇವ್.— ಈ ಸಭೆಗೆ ಬೆಂಗಳೂರು ನಗರದ ಶಾಸಕರನ್ನೂ ದಯವಿಟ್ಟು ಮಾನ್ಯ ಮುಖ್ಯ ಮಂತ್ರಿಗಳು ಕರೆಯಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಆರ್. ಗುಂಡೂರಾವ್.—ನೀವು ಬಂದರೆ ಯಾರು ಬೇಡವೆಂದು ಹೇಳುತ್ತಾರೆ ? ಕರೆಯೋಣ. ಏಕೆಂದರೆ, ಶಾಸೆಲ್ಲರೂ ಇದರಲ್ಲಿ ಜಾಸ್ತಿ ಇನ್‌ವಾಲ್ವ್ ಆಗಿದ್ದೀರಿ ! ನಗರಸಭೆಗೆ ಏತಕ್ಕೆ ಚುನಾವಣೆ ಬೇಡವೆಂದು ಹೇಳುತ್ತೀರಿ ? ಏಕೆಂದರೆ, ಮೇಯರ್ ಬಂದರೆ ತಮ್ಮನ್ನೆಲ್ಲ ಕರೆಯುವುದು ಬೇಡವೆಂದು ಹೇಳಿ ಬಿಡುತ್ತಾರೆಂದು !

ಶ್ರೀ ಎಂ. ಚಂದ್ರುಲೇಖಿರ್.— ಇದು ಸತ್ಯಕ್ಕೆ ದೂರವಾದುದು. ನಗರಸಭೆಗೆ ಚುನಾವಣೆಯನ್ನು ಮಾಡಿ ಎಂದು ನಾವು ಒತ್ತಾಯ ಮಾಡುತ್ತಲೇ ಇದ್ದೇವೆ. ಈಗಲಾದರೂ ನಗರ ಸಭೆಗೆ ಚುನಾವಣೆಯನ್ನು ತಾವು ಘೋಷಿಸಬೇಕು.

ಶ್ರೀ ಆರ್. ಗುಂಡೂರಾವ್,— ೧೯೭೧ರಿಂದಲೂ ಮೈಸೂರು ನಗರಸಭೆಗೂ ಚುನಾವಣೆ ಆಗಿಲ್ಲ. ಇಲ್ಲೂ ಆಗಿಲ್ಲ. ಏತಕ್ಕೆ ? They do not want election because when once the Corporation comes into existence, what is the work for City Legislators ? You tell me. They know they have no work at all. That is not the issue. We will take it up some time latter. I will call this meeting. Even to-day I am prepared or on Monday. Even now I request all of you, if you have any individual or group influence on these strike people, you tell them to go for work. Let them leave this responsibility to the House. We will discuss and thrash out the problem in an open manner. We will work out and we will try to achieve something and see that healthy atmosphere is created.

ಉಪಾಧ್ಯಕ್ಷರು.— ಈ ವಿಚಾರ ಇಲ್ಲಿಗೆ ಮುಗಿಯಿತು, ಈಗ ಗಮನ ಸೆಳೆಯುವ ಸೂಚನೆಯನ್ನು ಚರ್ಚೆಗೆ ತೆಗೆದುಕೊಳ್ಳಲಾಗುವುದು.

ಸಾರ್ವಜನಿಕ ಮಹತ್ವದ ಜರೂರಿನ ಮನ ಸೆಳೆಯುವ ಸೂಚನೆ

ವಿಷಯ,— ಸಗಟು ವ್ಯಾಪಾರಗಾರರು ತಮ್ಮ ಮಳಿಗೆಗಳನ್ನು ಯಶವಂತಪುರಕ್ಕೆ ಬದಲಾವಣೆ ಮಾಡತಕ್ಕ ಸಂದರ್ಭದಲ್ಲಿ ಆಗಿರುವ ಕೆಲವು ತೊಂದರೆಗಳು.

ಶ್ರೀ ಎ. ಲಕ್ಷ್ಮೀಸಾಗರ್ (ಚಿಕ್ಕಪೇಟೆ).— ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಾರುಕಟ್ಟೆ ಮತ್ತು ಪುಜರಾಯಿ ಇಲಾಖೆಗಳ ರಾಜ್ಯ ಸಚಿವರಾಗಮನವನ್ನು ಸಗಟು ವ್ಯಾಪಾರಗಾರರು ತಮ್ಮ ಮಳಿಗೆಗಳನ್ನು ಯಶವಂತಪುರಕ್ಕೆ ಬದಲಾವಣೆ ಮಾಡತಕ್ಕ ಸಂದರ್ಭದಲ್ಲಿ ಒಳಗಾಗಿರತಕ್ಕ ಕೆಲವು ತೊಂದರೆಗಳ ಬಗ್ಗೆ ಸೆಳೆಯುವುದಕ್ಕೆ ಇಷ್ಟಪಡುತ್ತೇನೆ.